ಅಚಲ

ತಿಂಗಳ ಪತ್ರಿಕೆ

ಡಿಸೆಂಬರ್ 2000

ಒಳಗೇನಿದೆ ?

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ, ಬೆಂಗಳೂರು

ಅಚಲ

ಸಂಪುಟ - 15 ಸಂಚಿಕೆ - 10

ಸಂಪಾದಕ ಮಂಡಲಿ

ಎನ್. ಗಾಯತ್ರಿ

ನೇಮಿಚಂದ್ರ, ದೇವಿ,

ಬಿ. ಎನ್. ಸುಮಿತ್ರಾಬಾಯಿ

ಶಾಂತಾನಾಗರಾಜ್

ಹೆಚ್. ಎನ್: ಗೀತಾ

ಹೇಮಲತಾ ಮಹಿಷಿ

ಪ್ರಕಾಶಕರು

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ

ಬೆಂಗಳೂರು

ಚಂದಾ ಹಣವನ್ನು ಚೆಕ್‌ನಲ್ಲಿ ಕಳುಹಿಸುವವರು ರೂ. 10 ಬ್ಯಾಂಕ್ ಕಮೀಷನ್ ಸೇರಿಸಿ ಕಳುಹಿಸಬೇಕು. ಎಂ. ಓ. ಫಾರ್ಮಿನ ಕೊನೆಯ ಭಾಗದಲ್ಲಿ ತಮ್ಮ ಹೆಸರು ವಿಳಾಸಗಳನ್ನು ಸ್ಪಷ್ಟವಾಗಿ ನಮೂದಿಸಬೇಕು.

ಬದಲಾದ ವಿಳಾಸವನ್ನು ದಯವಿಟ್ಟು ಬರೆದು ತಿಳಿಸಿ.

Achala - Edited by
Dr. N. Gayathri

Published by
Dr. G. Ramakrishna on behalf of Jagruthi Mahila Adhyayana Kendra

Printed at
Lipi Mudrana
Bangalore - 560 004

ಆತ್ಮೀಯರೇ,

ಕಳೆದ 15 ವರ್ಷಗಳಿಂದಲೂ ತಾವುಗಳು ಪ್ರೀತಿ, ಅಭಿಮಾನದಿಂದ ಅಚಲ ಪತ್ರಿಕೆಯನ್ನು ನಿಮ್ಮದಾಗಿಸಿಕೊಂಡು ಪೋಷಿಸುತ್ತಾ ಬಂದಿರುತ್ತೀರಿ. ಮಹಿಳಾ ಚಳುವಳಿಯ ಮತ್ತು ಸಂಶೋಧನೆಯ ಕ್ಷೇತ್ರದಲ್ಲಿ ಇನ್ನೂ ಬೆಟ್ಟದಷ್ಟು ಕೆಲಸವಾಗಬೇಕಿದೆ. ಈ ಮಹತ್ತರ ಕಾರ್ಯದಲ್ಲಿ ನಾವೆಲ್ಲರೂ ಒಟ್ಟಾಗಿ ಶ್ರಮಿಸಬೇಕಿದೆ. ನೀವೂ ಅಚಲ ಪತ್ರಿಕೆಯನ್ನು ನಿಮ್ಮ ವಿಚಾರಗಳ ವೇದಿಕೆಯನ್ನಾಗಿ ಮಾಡಿಕೊಳ್ಳಿ ಮತ್ತು ಪತ್ರಿಕೆಯ ಪ್ರಸಾರವನ್ನು ಹೆಚ್ಚಿಸುವಲ್ಲಿ ನೆರವಾಗಿ.

ಯಾವುದೇ ವಿವರಗಳನ್ನು ಬರೆಯದ ಚಂದಾಹಣವು ಹಲವಾರು ಎಂ.ಓ.ಗಳಲ್ಲಿ ನಮಗೆ ತಲುಪಿದೆ. ಚಂದಾದಾರರು ದಯವಿಟ್ಟು ಎಂ.ಓ. ಫಾರ್ಮಿನ ಹಿಂಭಾಗದಲ್ಲಿ ವಿಳಾಸವನ್ನು ಬರೆಯಿರಿ.

ಅಚಲದ ಚಂದಾ ವಿವರಗಳು ಹೀಗಿವೆ :

ವಾರ್ಷಿಕ ಚಂದಾ : ರೂ. 40/- (ವ್ಯಕ್ತಿಗಳಿಗೆ)
ರೂ. 75/- (ಸಂಸ್ಥೆಗಳಿಗೆ)
ಅಜೀವ ಚಂದಾ : ರೂ. 300/- (ವ್ಯಕ್ತಿಗಳಿಗೆ)
ರೂ. 400/- (ಸಂಸ್ಥೆಗಳಿಗೆ)

ಗಮನಿಸಿ

ಅಚಲ ವಿಳಾಸ ಬದಲಾಗಿದೆ

108, ಸ್ಕೈಲೈನ್ ಸುರಭಿ, 14-ಬಿ, ವಿದ್ಯಾಪೀಠ ರಸ್ತೆ,
ಬನಶಂಕರಿ 3ನೇ ಹಂತ, ಬೆಂಗಳೂರು - 560 085

ರಕ್ಷಕರೇ ಭಕ್ಷಕರಾದಾಗ!

ಕನ್ನಡದ ಕಣ್ಮಣಿ ರಾಜಕುಮಾರ್ ವೀರಪ್ಪನ ಸೆರೆಯಿಂದ ಮುಕ್ತರಾಗಿ ನಾಡಿಗೆ ಹಿಂತಿರುಗಿ ಬಂದು ಎಲ್ಲರಲ್ಲೂ ಒಂದು ರೀತಿಯ ನೆಮ್ಮದಿ ಮೂಡಿದೆಯಾದರೂ ಈ ಸಂದರ್ಭದಲ್ಲಿ ಮತ್ತೆ ಮತ್ತೆ ಪ್ರಕಾಶಕ್ಕೆ ಬಂದ ಸಮಸ್ಯೆಗಳು ಪ್ರಜ್ಞಾವಂತರಿಗೆ ನೆಮ್ಮದಿ ಕಲಕಿ ಚಿಂತೆಗೀಡುಮಾಡಿದೆ. ವೀರಪ್ಪನ ಆಣತಿಯಂತೆ ಪದೇ ಪದೇ ಟಾಡಾ ಬಂಧಿಗಳನ್ನು ನ್ಯಾಯಾಲಯಕ್ಕೂ ಸೆರೆಮನೆಗೂ ಎಳೆದಾಡಿ ಅವರ ಸಮಸ್ಯೆಯನ್ನು ಸಾರ್ವಜನಿಕರಿಗೆ ಜ್ವಲಂತವಾಗಿ ಪರಿಚಯ ಮಾಡಿಕೊಟ್ಟ ಸರ್ಕಾರ ಇನ್ನಾದರೂ ಶೀಘ್ರವಾಗಿ ಈ ದಿಕ್ಕಿನಲ್ಲಿ ಕಾರ್ಯಪ್ರವೃತ್ತರಾಗಿ ನ್ಯಾಯ ದೊರಕಿಸಿಕೊಡಬೇಕಾಗಿದೆ. ಈ ಸಂದರ್ಭದಲ್ಲಿ ಸೆರೆಮನೆಯಲ್ಲಿ ಕೈದಿಗಳಲ್ಲಿ ನಿಜವಾದ ಅಪರಾಧಿಗಳೆನಿಸಿಕೊಂಡವರ ಸಂಖ್ಯೆ ಅತಿ ಕಡಿಮೆಯೇ. ಆದರೆ ವೀರಪ್ಪನಿಗೆ ನೆರವು ನೀಡಿರಬಹುದೆಂಬ ಅನುಮಾನದ ಮೇಲೆ ಬಂಧಿತರಾದ ಹಲವಾರು ಎಳೆಯ ಯುವಕ, ಯುವತಿಯರೂ ಯಾವುದೇ ವಿಚಾರಣೆಯೂ ಇಲ್ಲದೆ, ನ್ಯಾಯವನ್ನು ನಿರೀಕ್ಷಿಸುತ್ತಾ ಕಳೆದ ಎಂಟುವರ್ಷಗಳಿಂದ ಜೈಲಿನಲ್ಲಿ ಕೊಳೆಯುತ್ತಿರುವುದು ನಾವೆಲ್ಲರೂ ತಲೆತಗ್ಗಿಸಬೇಕಾದಂತಹ ಸಮಾಚಾರ. ಈ ದಿಕ್ಕಿನಲ್ಲಿ ಎಲ್ಲ ಪ್ರಜ್ಞಾವಂತರೂ ಸರ್ಕಾರವನ್ನು ಒತ್ತಾಯಿಸಿ ನಿರಪರಾಧಿಗಳನ್ನು ಬಂಧ ಮುಕ್ತರನ್ನಾಗಿಸಬೇಕು.

ಈ ಸಂಗತಿಗಳ ಹಿನ್ನೆಲೆಯಲ್ಲಿಯೇ ನರಹಂತಕ ವೀರಪ್ಪನ್‌ನನ್ನು ಹುಟ್ಟಡಗಿಸುವ ಸಲುವಾಗಿ ನೇಮಿಸಲಾಗಿರುವ ತಮಿಳುನಾಡು ರಾಜ್ಯದ ವಿಶೇಷ ಕಾರ್ಯಾಚರಣೆ ಪಡೆಯ ಆರಕ್ಷಕರು ಸುಮಾರು ಒಂದು ವರ್ಷದ ಹಿಂದೆ ಕರ್ನಾಟಕದ ಗಡಿ ಭಾಗದಲ್ಲಿರುವ ಕಾಡು ಜನಾಂಗದ ಅಮಾಯಕ ಹೆಣ್ಣು ಮಕ್ಕಳ ಮೇಲೆ ನಡೆಸಿದ ಸಾಮೂಹಿಕ ಅತ್ಯಾಚಾರದ ಅಮಾನವೀಯತೆ ಕಠೋರ ವಾಸ್ತವವನ್ನು ನಮ್ಮ ಮುಂದೆ ತೆರೆದಿಡುವುದಲ್ಲದೆ ಮಹಿಳೆಯರ ಅಸಹಾಯಕ ಸ್ಥಿತಿಯ ಬಗ್ಗೆ ಗಾಭರಿ ಹುಟ್ಟಿಸುತ್ತದೆ.

ಖಾಕಿ ಧಾರಿ ರಕ್ಕಸರು ತಮ್ಮ ಮೇಲೆ ನಡೆಸಿದ ಸಾಮೂಹಿಕ ಲೈಂಗಿಕ ದೌರ್ಜನ್ಯದಿಂದ ಆಘಾತಗೊಂಡಿರುವ ಇಲ್ಲಿನ ಎಳು ಹೆಣ್ಣು ಮಕ್ಕಳು ದುಸ್ವಪ್ನದಿಂದ ಹೊರಗೆ ಬರಲು ಸಾಧ್ಯವಾಗೇ ಇಲ್ಲ. ವೀರಪ್ಪನ್‌ನ ಕಾಡು ಪ್ರದೇಶದಲ್ಲಿ ಕರ್ನಾಟಕದ ಅಂಚಿಗೆ ಬರುವ ಉಪಾಕಾರ ಕಾಲನಿಯ ಜೇನುಕುರುಬ ಮಹಿಳೆಯರ ಮೇಲೆ 1998ರ ಏಪ್ರಿಲ್ 22ರಂದು ತಮಿಳುನಾಡು ಎಸ್. ಟಿ. ಎಫ್. ತಂಡದ ಪೋಲೀಸರು ಮಧ್ಯರಾತ್ರಿಯಲ್ಲಿ ನಡೆಸಿದ ದಾಳಿ ಮತ್ತು ಆಕ್ರಮಣ ಎಂತಹ ಮಾನವಂತರೂ ದಿಗ್ಭ್ರಮೆ ಪಡುವ ಹಾಗೂ ನಾಚಿಕೆ ಪಟ್ಟು ಕೊಳ್ಳುವ ಕೃತ್ಯವಾಗಿದೆ. ಪೋಲೀಸರ ಈ ದೌರ್ಜನ್ಯದಿಂದ ಭೀತಳಾದ ಮಂಜಿ ಎನ್ನುವ ಯುವಕಿ ಹಾಡಿಯಿಂದ ಓಡಿ ಹೋಗಿ ಕಾಡು ಸೇರಿದಳು. ಅವರೊಂದಿಗೆ ಬೆಳ್ಳಮ್ಮ ಮತ್ತು ನಾಗಿಯೆಂಬ ಮಹಿಳೆಯರೂ ಕಾಡು ಸೇರಿದರು. ಈ ಮುಗ್ಧ ಜನರ ಮೇಲೆ ನಡೆದಿರುವ ಲೈಂಗಿಕ ಹಲ್ಲೆ ಯಾವುದೇ ರೀತಿಯಲ್ಲೂ ಮಾನವ ಹಕ್ಕುಗಳ ದಮನವೆನಿಸಿಕೊಂಡು ಸಾರ್ವಜನಿಕರ ಗಮನ ಸೆಳೆದಿಲ್ಲ. ಯಾವುದೇ ನಾಗರೀಕ ಸಮಾಜದಲ್ಲಿ ಅತ್ಯಾಚಾರವೆನ್ನುವುದು ಶಿಕ್ಷಾರ್ಹ ಅಪರಾಧವಾಗಿದೆ. ಆದರೆ ಅತ್ಯಾಚಾರಿಗಳನ್ನು ಶಿಕ್ಷಿಸಿ ರಕ್ಷಣೆ ನೀಡಬೇಕಾದ ಪೋಲೀಸರೇ ಇಂತಹ ಘೋರ ಕೃತ್ಯಗಳನ್ನು ನಡೆಸಿ ಶಿಕ್ಷೆಗೆ ಒಳಗಾಗದಿದ್ದರೆ ನ್ಯಾಯಾಕಾಂಕ್ಷಿಗಳಿಗೆ ನ್ಯಾಯ ದೊರೆಯುವುದೆಂತು?

ಈ ಒಟ್ಟು ಘಟನೆಯ ವಿವರಗಳನ್ನು ಪೋಲೀಸ್ ವರಿಷ್ಠರ ಗಮನಕ್ಕೆ ತಂದ ಸ್ವಯಂ ಸೇವಾ ಸಂಸ್ಥೆಯ ಪ್ರಯತ್ನಗಳ ಫಲವಾಗಿ ಒಟ್ಟು ಪ್ರಸಂಗವನ್ನು ಕುರಿತಂತೆ ತನಿಖೆಗೆ ಆದೇಶಿಸಿದ್ದರೂ ತನಿಖಾ ವರದಿಗಳು ಬಯಲಾಗಿಲ್ಲ. ಆದರಿಂದ ಅಪರಾಧಿಗಳು ತಲೆಯೆತ್ತಿ ರಾಜಾರೋಷದಿಂದ ಮೆರೆಯುತ್ತಿದ್ದಾರೆ. ಗ್ರಾಮೀಣ ಪ್ರದೇಶದ ಗಿರಿಜನ ಕುಟುಂಬಗಳಲ್ಲಿ ತಮ್ಮ ಮನೆ ಮಂದಿಯೆದುರೇ ಪೋಲೀಸರಿಂದ ಮಹಿಳೆಯರು ಅತ್ಯಾಚಾರಕ್ಕೊಳಗಾಗಬೇಕಾದ ಇಂತಹ ದುಸ್ಥಿತಿ ಒದಗಿ ಬಂದಿರುವುದು ಇಡೀ ನಮ್ಮ ಸಮಾಜಕ್ಕೆ ತಟ್ಟಿದ ಕಳಂಕವಾಗಿದೆ. ಅದ್ದೂರಿ ವೈಭವ, ಪ್ರದರ್ಶನಗಳೇ ಇಂದಿನ ಸಂಸ್ಕೃತಿಯ ನಾಡಿಮಿಡಿತವಾಗಿರುವಾಗ ದಮನಕ್ಕೊಳಗಾದವರ ನೋವಿನ ಧ್ವನಿ ಯಾರಿಗೆ ಕೇಳಿಸುವುದು? ಭಕ್ಷಕರಾದ ಆರಕ್ಷಕರಿಗೆ ಅವರ ಜವಾಬ್ದಾರಿಯನ್ನು ನೆನಪಿಸಬೇಕಾದ, ಮರೆತರೆ ಅವನ್ನು ಶಿಕ್ಷಿಸಬೇಕಾದ ಕೆಲಸವೆರಡನ್ನೂ ಇಂದು ಸಮಾಜದ ಪ್ರಜ್ಞಾವಂತರು ಮಾಡಬೇಕಾಗಿದೆ.

- ಎನ್. ಗಾಯತ್ರಿ

ಭಾರತದ ಮಹಿಳೆಯರಿಗಾಗಿ ವೈದ್ಯಳಾದ ಡಾ॥ ಈಡಾ ಸ್ಕಡರ್

ನೇಮಿಚಂದ್ರ

ಒಂದು ಮುಂಜಾನೆ ಡಾ॥ ಜಾನ್ ಅವರ ಕುಟುಂಬ ಊಟದ ಮೇಜಿನ ಬಳಿ ಕುಳಿತಂತೆ, ಪುಟ್ಟ ಈಡಾ ಕೇಳಿದಳು-

'ಅಪ್ಪ ನನಗೆ ಇನ್ನಷ್ಟು ಬ್ರೆಡ್ಡು ಬೇಕು....'

'ಇವತ್ತು ಇಲ್ಲ ಮರಿ' ಅಮ್ಮ ಹೇಳಿದಳು.

'ನನಗೆ ಹೊಟ್ಟೆ ಹಸಿಯುತ್ತಿದೆ. ಹೊಟ್ಟೆ ತುಂಬದಿದ್ದರೆ ನಾ ಕಾಯಿಲೆ ಬೀಳುತ್ತೇನೆ, ಇಲ್ಲ ಸತ್ತೇ ಹೋಗುತ್ತೇನೆ.' ಈಡಾ ಹಟದಿಂದ ಹೇಳಿದಳು.

'ಅಂಥದ್ದೇನೂ ಆಗದು' ಶಾಂತವಾಗಿ ನುಡಿದ ಡಾ॥ ಜಾನ್ ಕೈ ಚಾಚಿ -

'ಬಾ ಮಗು ಬೆಳಗಿನ ಕೆಲಸ ಬಹಳವಿದೆ, ಕೆಲಸ ಮುಗಿದಾಗ, ನಿನಗೆ ಮತ್ತೊಮ್ಮೆ ತಿನ್ನಲು ಬ್ರೆಡ್ ಸಿಗಬಹುದು' ಮಗಳನ್ನು ಹೊರಗೆ ಕರೆದೊಯ್ದ.

ಬಿಸಿಲು ದೇಶದ ಸುಡುವ ಸೂರ್ಯನ ಅಡಿಯಲ್ಲಿ ತಂದೆ ಮಗಳು ನಡೆದರು. ಈಡಾ ಕೇವಲ ಏಳು ವರ್ಷದ ಬಾಲೆ. ತಂದೆ ಇಡೀ ವಾರ ಸುತ್ತಲಿನ ಹಳ್ಳಿಗಳಿಗೆ ಹೋಗಿ ಕಾಯಿಲೆ ಬಿದ್ದ ಜನರನ್ನು ಉಪಚರಿಸುತ್ತಿದ್ದ. ತಂದೆ ಮನೆಗೆ ಬಂದಾಗ ಆತನ ಕಣ್ಣುಗಳಲ್ಲಿ ನೋವಿರುತ್ತಿತ್ತು, ಮಾತಿಲ್ಲದ ಮೌನವಿತ್ತು, ತಂದೆಯೊಡನೆ ಹಿಂತಿರುಗಿ ಮನೆಗೆ ಬಂದ ಈಡಾ ನೋಡಿದಳು. ಅಡಿಗೆ ಮನೆಯಲ್ಲಿ ಬ್ರೆಡ್ಡನ್ನು ದೊಡ್ಡ ಬೆತ್ತದ ಬುಟ್ಟಿಯಲ್ಲಿ ಮುರಿದು ಹಾಕುತ್ತಿದ್ದರು. ಈಡಾಳ ಕಣ್ಣುಗಳು ಅರಳಿದವು. ಬಹುಶಃ ತನಗೆ ತಿನ್ನಲು ಇನ್ನಷ್ಟು ಬ್ರೆಡ್ಡು ಸಿಗಬಹುದು. 'ನನಗೆ ಬ್ರೆಡ್ಡು' ಎಂದು ಹೇಳಬೇಕು ಅಷ್ಟರಲ್ಲಿ ತಂದೆ ಬುಟ್ಟಿಯನ್ನು ಅವಳ ಕೈಗೆ ಕೊಟ್ಟು ಹಿತ್ತಲಿನ ಬಾಗಿಲಿಗೆ ಕರೆದೊಯ್ದ. ಅಲ್ಲಿ ನೂರಾರು ಮಕ್ಕಳು ನೆಲದ ಮೇಲೆ ಸಾಲಾಗಿ ಕುಳಿತು ಕಾಯುತ್ತಿದ್ದರು. ಹರುಕಲು ಬಟ್ಟೆಯಲ್ಲಿ ನೆತ್ತಿಯ ಉರಿ ಬಿಸಿಲಿನಲ್ಲಿ ಕಾದ ಮಕ್ಕಳು. 'ಪಸಿ... ಪಸಿ' ಕೂಗಿದ ಕಂದು ಬಣ್ಣದ ಮಕ್ಕಳು ಈಡಾಳ ಲಂಗವನ್ನು ಹಿಡಿದು ಜಗ್ಗಿ ಎಳೆದಿದ್ದವು. 'ಅಪ್ಪ ಪಸಿ ಎಂದರೇನು ?' ಈಡಾ ಮುಗ್ಧವಾಗಿ ಕೇಳಿದಳು. 'ಪಸಿ ಅಂದರೆ ಹಸುವು' ತಂದೆ ಉತ್ತರಿಸಿದರು. 'ಅವರಲ್ಲಿ ತಿನ್ನಲು ಏನೂ ಇಲ್ಲ. ಈ ಬುಟ್ಟಿಯ ತುಂಬಾ ಬ್ರೆಡ್ಡಿದೆ', ತಂದೆ ಅವಳ ಕಣ್ಣುಗಳನ್ನೇ ನೇರವಾಗಿ ನೋಡುತ್ತಾ ಉತ್ತರಿಸಿದರು. ಗಂಟೆಗಳು ಬುಟ್ಟಿಯ ಬ್ರೆಡ್ಡನ್ನು ಹಂಚುವುದರಲ್ಲಿ ಕಳೆದವು. ಈಡಾಗೆ ಪ್ರಪಂಚವೆಲ್ಲ ಪುಟ್ಟ ಪುಟ್ಟ ಕಂದು ಬಣ್ಣದ ಆತುರದ ಕೈಗಳಿಂದ ತುಂಬಿದಂತೆ ಕಂಡಿತು. ಸುತ್ತಲು ಆವರಿಸಿದ ಒಂದೇ ಕೂಗು 'ಹಸಿವು... ಹಸಿವು'. ಇದೀಗ ಈಡಾ ಬ್ರೆಡ್ಡಿನ ತುಂಡನ್ನು ಮತ್ತಷ್ಟು ಮುರಿದು ತುಂಡು ತುಂಡು ಮಾಡಿ ನೀಡಿದಳು. ತೆರೆದ ಹಸಿದ ಅದೆಷ್ಟೋ ಬಾಯಿಗಳಿಗೆ ಬ್ರೆಡ್ಡು ಸಾಲದಾಗಿತ್ತು. ಪುಟ್ಟ ಈಡಾಳ ತಲೆಯಲ್ಲಿ ಒಂದೇ ಪ್ರಶ್ನೆ. ಅವರೆಲ್ಲರಿಗೂ ಆಹಾರವೇಕಿಲ್ಲ ? ಏಕೆ ಪ್ರತಿಯೊಬ್ಬರೂ ಹಸಿದಿದ್ದಾರೆ. ಆ ಮಕ್ಕಳೇಕೆ ದಿನಗಟ್ಟಲೆ ಏನನ್ನೂ ತಿಂದಿಲ್ಲ, ಏಕಷ್ಟು ಕೃಷರಾಗಿದ್ದಾರೆ, ನಿಶ್ಶಕ್ತರಾಗಿದ್ದಾರೆ ?

ಮನೆಯ ಒಳ ಬಂದ ತಂದೆ, ಪುಟ್ಟ ಈಡಾಳನ್ನು ಎತ್ತಿ ತೊಡೆಯ ಮೇಲೆ ಕೂಡಿಸಿಕೊಂಡ. 'ಈಗಲೂ ನಿನಗೆ ಮತ್ತಷ್ಟು ಬ್ರೆಡ್ಡು ಬೇಕಾ ಈಡಾ ?' ಮೃದುವಾಗಿ ಪ್ರಶ್ನಿಸಿದ. ಬೇಡವೆಂಬಂತೆ ಈಡಾ ತಲೆ ಆಡಿಸಿದಳು. ಅವಳ ಹೊಟ್ಟೆ ಹಸಿದಿತ್ತು, ಅವಳ ಹೊಟ್ಟೆ ಸದಾ ಹಸಿದಿರುತ್ತಿತ್ತು. ಆದರೆ ಈ ಬಾರಿ 'ಇಲ್ಲ ಅಪ್ಪ, ಬೇಡ' ಎಂದು ಉತ್ತರಿಸಿದಳು. ಅಪ್ಪ ವಿವರಿಸಿದರು - 'ಭಾರತದಲ್ಲಿ ಮಳೆ ಬರದಿದ್ದರೆ, ಬೆಳೆ ಬೆಳೆಯುವುದಿಲ್ಲ. ತಿನ್ನಲು ಆಹಾರ ಇರುವುದಿಲ್ಲ. ಮರ ಗಿಡಗಳೆಲ್ಲ ಒಣಗಿ ನಿಂತಿವೆ. ಕುಡಿಯಲು ನೀರು ಕೂಡಾ ದಕ್ಕದು. ಇದೀಗ ಎರಡು ವರ್ಷಗಳಿಂದ ಇಲ್ಲಿ ಮಳೆಯಾಗಿಲ್ಲ. ನೋಡು ಆ ದೂರದ ಬೆಟ್ಟಗಳನ್ನು, ಅವೆಷ್ಟು ಕಂದು ಬಣ್ಣದಲ್ಲಿ ಒಣಗಿ ನಿಂತಿವೆ'. ಆ ರಾತ್ರಿ ಇಡೀ ಈಡಾ ದೇವರನ್ನು ಪ್ರಾರ್ಥಿಸಿದಳು. 'ದೇವರೇ ಬೆಟ್ಟಗಳನ್ನು ಹಸಿರು ಮಾಡು. ಮಳೆ ಬರಿಸು' ಮತ್ತೆ ಮೂರು ವರ್ಷ ಮಳೆಯಾಗಲಿಲ್ಲ; 1877ರ ಭೀಕರ ಬರಗಾಲವದು. ಐವತ್ತು ಲಕ್ಷಕ್ಕೂ ಹೆಚ್ಚು ಜನ ಭಾರತದಲ್ಲಿ ಸತ್ತರು. ಪ್ರತಿದಿನ ಈಡಾ ಬ್ರೆಡ್ಡು ತುಂಬಿದ ಬುಟ್ಟಿಯನ್ನು ಹೊತ್ತು ಹೊರಡುವಳು. ಹಸಿದ ಮಕ್ಕಳ ಆತುರದ ಕೈಗಳಿಗೆ ನೀಡುವಳು. ಅವಳ ಕಿವಿಯಲ್ಲಿ ಸದಾ ಪ್ರತಿಧ್ವನಿಸಿದ ಒಂದೇ ಶಬ್ದ 'ಪಸಿ ಪಸಿ.... ಹಸಿವು' ಈಡಾ ಅದನ್ನೆಂದೂ ಮರೆಯಲಿಲ್ಲ.

ಕಿಶೋರ ವಯಸ್ಸಿನ ಈಡಾ ಸಾವಿರಾರು ಮೈಲಿಗಳಾಚೆ ಅಮೆರಿಕಾದ ಶಾಲೆಯಲ್ಲಿದ್ದಳು. ಸಮೃದ್ಧಿಯ ದೇಶದಲ್ಲಿದ್ದ ಈಡಾ ಬಾಲ್ಯದಲ್ಲಿ ಕಂಡ ದೂರದ ಬಡ ಭಾರತದ ಆ ಚಿತ್ರಗಳನ್ನು ಮರೆಯಲು ಬಯಸಿದಳು. ಆದರೆ ಅದು ಸಾಧ್ಯವಿರಲಿಲ್ಲ. ಈಡಾ ಶಾಲೆಯಲ್ಲಿ ಅತ್ಯಂತ ಜನಪ್ರಿಯ ಹುಡುಗಿ. ಆಟದಲ್ಲಿ, ಪಾಠದಲ್ಲಿ, ತುಂಟತನದಲ್ಲಿ, ಕೀಟಲೆಯಲ್ಲಿ ಮುಂದಿದ್ದ ಈ ಹುಡುಗಿ ತನ್ನ ಶಾಲಾ ದಿನಗಳನ್ನು ಇನ್ನಿಲ್ಲದ ಖುಷಿಯಲ್ಲಿ ಕಳೆದಳು. ಚಿನ್ನದ ಬಣ್ಣದ ಕೂದಲಿನ, ನೀಲಿ ಕಣ್ಣುಗಳ ಸುಂದರ ಹುಡುಗಿ ಈಡಾ. ಈಡಾ ಈಗ ಹತ್ತೊಂಭತ್ತು ವರ್ಷದ ಯುವತಿ. ಸಂತಸದ ಸಂಭ್ರಮದ ದಿನಗಳು. ಪಾರ್ಟಿಗಳಿಗೆ, ನೃತ್ಯಕೂಟಕ್ಕೆ ಕರೆದೊಯ್ಯುವ ಹುಡುಗರು. ಅವರಾರಿಗೂ ಅವಳು ಕಂಡ ಭಾರತ ತಿಳಿದಿರಲಿಲ್ಲ. ಈಡಾಳ ತಂದೆ ಮತ್ತು ತಾಯಿ ಭಾರತದಲ್ಲಿದ್ದರು. ಇಷ್ಟೆಲ್ಲ ಶ್ರೀಮಂತ ದೇಶದ ಸಂತಸದ ನಡುವೆ ಇದ್ದ ಈಡಾಗೆ ಒಂದು ದಿನ ಇದ್ದಕ್ಕಿದ್ದಂತೆ ತಂತಿ ಬಂದಿತು 'ನಿನ್ನ ಅಮ್ಮನಿಗೆ ಹುಷಾರಿಲ್ಲ. ನಿನ್ನ ಅಗತ್ಯವಿದೆ. ತಕ್ಷಣ ಹೊರಟು ಬಾ' ಭಾರತದಿಂದ ಕರೆ ಬಂದಿತ್ತು. 'ಉಹುಂ ನಾ ಭಾರತಕ್ಕೆ ಹೋಗುವುದಿಲ್ಲ' ತಟ್ಟನೆ ಈಡಾಗೆ ಅನಿಸಿತ್ತು. ಅದೇ ಬಿಸಿಲು ಮತ್ತು ಹಸಿವಿನ ದೇಶಕ್ಕೆ ಹಿಂತಿರುಗಲು ಮನಸ್ಸಾಗಲಿಲ್ಲ. ಅಮೆರಿಕ, ಈ ಸಮೃದ್ಧಿ, ಸ್ನೇಹಿತರು, ಈ ಪಾರ್ಟಿಗಳು, ಹುಡುಗರು ಎಲ್ಲವನ್ನೂ ಬಿಟ್ಟು ಹೋಗುವುದು ಹತ್ತೊಂಭತ್ತು ವರ್ಷದ ಹುಡುಗಿಗೆ ಕಷ್ಟವಿತ್ತು. ಆದರೆ ಅಮ್ಮ ಕಾಯಿಲೆ ಬಿದ್ದಿದ್ದಳು. 'ತಾನು

ಹೋಗಬೇಕು, ಆದಷ್ಟು ಬೇಗ' ಈಡಾಳ ಒಳದನಿ ನುಡಿಯಿತು.

ಈಡಾ ಭಾರತಕ್ಕೆ ಹಿಂತಿರುಗಿದಳು. ತಂದೆಯೊಡನೆ ಸುತ್ತಲಿನ ಹಳ್ಳಿಗಳ ನೂರಾರು ಮನೆಗಳಿಗೆ ಭೆಟ್ಟಿ ಕೊಟ್ಟಳು. ಒಂದು ದಿನ ಒಬ್ಬಾತ ಓಡೋಡಿ ಬಂದ 'ಡಾಕ್ಟರ್ ಡಾಕ್ಟರ್ ಬೇಗ ಬನ್ನಿ. ದಯವಿಟ್ಟು ಬೇಗ ಬನ್ನಿ. ನನಗಲ್ಲ, ನನ್ನ ಹೆಂಡತಿಗೆ. ತುಂಬಾ ಚಿಕ್ಕ ವಯಸ್ಸಿನವಳು' ಕೂಗಿದ. ತಂದೆಯೊಡನೆ ಈಡಾ ಓಡಿದಳು. ಆದರೆ ಓಡಿ ಬಂದ ತಂದೆಗೆ ರೋಗಿಯನ್ನು ತೋರಿಸಲಿಲ್ಲ. ತಂದೆ ಒಂದು ಗೋಡೆಯ ಎದುರು ನಿಂತರು. ಗೋಡೆಯ ಒಂದು ಸಣ್ಣ ರಂಧ್ರದಿಂದ ಕೃಶವಾಗಿ ಬಿಳುಚಿಕೊಂಡ ಕೈ ಹೊರಗೆ ಬಂದಿತು. ಡಾ॥ ಜಾನ್ ಮೃದುವಾಗಿ ಮಣಿಕಟ್ಟನ್ನು ಹಿಡಿದು ನಾಡಿ ಮಿಡಿತ ಗಮನಿಸಿದರು. ನೂರೆಂಟು ಪ್ರಶ್ನೆಗಳನ್ನು ಕೇಳಿದರು. ರೋಗಿಯನ್ನು ನೋಡದೆಯೇ ಔಷಧಿ ನೀಡಿದರು. 'ಅಪ್ಪ ನೀ ಒಳಗೆ ಏಕೆ ಹೋಗಲಿಲ್ಲ, ರೋಗಿಯನ್ನು ನೋಡದೆಯೇ ಹೇಗೆ ಚಿಕಿತ್ಸೆ ನೀಡುತ್ತೀಯ?' ಈಡಾ ಅಚ್ಚರಿಯಿಂದ ಕೇಳಿದಳು. ತಂದೆ ನಿಟ್ಟುಸಿರಿಟ್ಟು ಹೇಳಿದರು 'ಇದು ಇಲ್ಲಿಯ ಪದ್ಧತಿ. ಭಾರತದಲ್ಲಿ ಹೆಣ್ಣು ಮಕ್ಕಳಿಗೆ ಬಹಳ ಬೇಗನೇ ಮದುವೆ ಮಾಡುತ್ತಾರೆ. ಕೇವಲ ಹದಿಮೂರು ಹದಿನಾಲ್ಕನೇ ವಯಸ್ಸಿಗೇ ವಿವಾಹವಾಗುತ್ತದೆ. ಅವರ ವಿಧಿ ವಿಧಾನಗಳು ಬಹಳ ಕಟ್ಟುನಿಟ್ಟಾದದ್ದು. ಅವರ ಧರ್ಮ ಅವರ ಪತ್ನಿಯನ್ನು ಬೇರೆ ಪುರುಷರ ದೃಷ್ಟಿಯಿಂದ ದೂರವಿಡುವಂತೆ ತಿಳಿಸುತ್ತದೆ'.

ಅಂದು ಈಡಾಗೆ ಭಾರತದ ಮಹಿಳೆಯ ಸ್ಥಿತಿ, ಗತಿ, ಅಸಹಾಯಕತೆಯ ದರ್ಶನವಾಗಿತ್ತು. ಮತ್ತೊಂದು ದಿನ ಈಡಾಳ ಬಳಿಗೆ ಓರ್ವ ಬ್ರಾಹ್ಮಣ ಓಡೋಡಿ ಬಂದ. 'ನನ್ನ ಎಳೆಯ ಪತ್ನಿಗೆ ಹೆರಿಗೆ ಆಗುತ್ತಿಲ್ಲ. ದಯವಿಟ್ಟು ಬೇಗ ಬನ್ನಿ, ಇಲ್ಲ ಅಂದರೆ ಸತ್ತೇ ಹೋಗುತ್ತಾಳೆ'. ಈಡಾ ಅಚ್ಚರಿಯಿಂದ ಕಣ್ಣರಳಿಸಿ ಹೇಳಿದಳು. 'ನನ್ನ ತಂದೆ ವೈದ್ಯರು. ಅವರನ್ನು ಕರೆತರುತ್ತೇನೆ. ನನಗೆ ಏನೂ ವೈದ್ಯ ಗೊತ್ತಿಲ್ಲ, ನಾನೇನು ಮಾಡಬಲ್ಲೆ?' ತಟ್ಟನೆ ಆ ಯುವಕನ ಕಣ್ಣಲ್ಲಿ ಕೋಪ ಝಳಪಿಸಿತು. 'ಏನು ಪರಪುರುಷನಿಗೆ ನನ್ನ ಹೆಂಡತಿಯನ್ನು ನೋಡಲು ಬಿಡಲೆ? ಅದಕ್ಕಿಂತ ಆಕೆ ಸತ್ತು ಹೋದರೇ ಒಳ್ಳೆಯದು'. ಸಾವು-ಬದುಕಿನ ಪ್ರಶ್ನೆಯಲ್ಲೂ ಆ ಯುವಕನಿಗೆ ತನ್ನ ರೀತಿ ರಿವಾಜುಗಳು ಮುಖ್ಯವಿದ್ದವು. ಈಡಾ ಮತ್ತೆ ಮತ್ತೆ ಹೇಳಿದಳು. 'ನನ್ನ ತಂದೆ ಇಲ್ಲದೆ ನಾನೇನೂ ಮಾಡಲಾರೆ' ಆ ಯುವಕ 'ನೀವೇನೂ ಮಾಡಲಾರಿರಾ? ಏನೂ?' ಪ್ರಶ್ನಿಸಿದ. 'ಇಲ್ಲ ನನಗೇನೂ ಗೊತ್ತಿಲ್ಲ, ನಾನೇನೂ ಮಾಡಲಾರೆ' ಈಡಾ ಉತ್ತರಿಸಿದಳು. ಆತ ಹೊರಟು ಹೋದ. ಏಕೋ ಈಡಾಳ ತಲೆಯ ತುಂಬಾ ಅದೇ ಪದಗಳು ಗಸ್ತು ಹೊಡೆದವು. 'ಏನೂ ಮಾಡಲಾರಿರಾ?' ಛೇ ನಾ ಏನಾದರೂ ಮಾಡುವಂತಿರಬೇಕಿತ್ತು. ಆ ಎಳೆಯ ಹುಡುಗಿಯನ್ನು ಉಳಿಸಿಕೊಳ್ಳಲು 'ಏನಾದರೂ ಸರಿ' ಮಾಡುವಂತಿರಬೇಕಿತ್ತು ಈಡಾ ಚಡಪಡಿಸಿದಳು.

ಅದೇ ರಾತ್ರಿ ಮತ್ತೆ ಬಾಗಿಲು ತಟ್ಟಿದ ಸದ್ದು. ಈ ಬಾರಿ ಓರ್ವ ಮುಸ್ಲಿಮ್ ಯುವಕ ನಿಂತಿದ್ದ. ಮತ್ತದೇ ಕತೆ, ಹೆಂಡತಿ ಸಾಯುತ್ತಿದ್ದಾಳೆ. ಈ ಬಾರಿ ಈಡಾ ವಾದಿಸಿದಳು. 'ತಂದೆಯ ಜೊತೆಯಲ್ಲಿ ನಾನೂ ಬರುತ್ತೇನೆ. ಜೊತೆಯಲ್ಲಿ ಹೆಂಗಸು ಇರುವಾಗ ನಿಮ್ಮ ನೀತಿ ನಿಯಮಕ್ಕೆ ಧಕ್ಕೆ ಬರುವುದಿಲ್ಲ' ಹೇಳಿದಳು. ಆದರೆ ಆತ ಹೇಳಿದ 'ಯಾವ ಹೊರಗಿನ ಗಂಡಸೂ ನನ್ನ ಹೆಂಡತಿಯನ್ನು ನೋಡುವಂತಿಲ್ಲ. ಆಕೆ ಸತ್ತರೂ ಪರವಾಗಿಲ್ಲ'. ಆತನೂ ಹೊರಟು ಹೋದ, ಕತ್ತಲೆಯಲ್ಲಿ ಕರಗಿ ಹೋದ. ಅದೇ ರಾತ್ರಿ ಮತ್ತೊಬ್ಬ 'ಮೇಲ್ಜಾತಿಯ ಹಿಂದು, ತನ್ನ ಹೆಂಡತಿಯ ನೋವಿನ ಕತೆ ಹೇಳಿ ಕರೆಯಲು ಬಂದ, ಒಂಟಿಯಾಗಿ ಹಿಂತಿರುಗಿದ. ಆ ರಾತ್ರಿ ಇಡೀ ಈಡಾಗೆ ನಿದ್ರೆ ಬರಲಿಲ್ಲ. ಸಾವಿರಾರು ಮೈಲಿಗಳಾಚೆ ಅವಳಿಗಾಗಿ ಅಮೆರಿಕಾ ಕಾದಿತ್ತು. ಆದರೆ ಇಲ್ಲಿ ಭಾರತದಲ್ಲಿ ಈಡಾ ಸಿಕ್ಕಿ ಹಾಕಿಕೊಂಡಿದ್ದಳು. ಅವಳ ಮನೆಯಿಂದ ಇಷ್ಟೇ ದೂರದಲ್ಲಿ ಹೆಣ್ಣು ಮಕ್ಕಳು ನರಳಿ ನರಳಿ ಸಾಯುತ್ತಿದ್ದರು. ಆದರೆ ಅವಳೇನೂ ಮಾಡುವಂತಿರಲಿಲ್ಲ. ಮರುದಿನ ತಮಟೆಯ ಸದ್ದು. ಮೂವರು ಹೆಂಗಸರೂ ಸತ್ತಿದ್ದರು. ಈಡಾಗೆ ಏನೊಂದೂ ಮಾಡಲಾಗಿರಲಿಲ್ಲ. ಈಡಾ ನೇರ ತಂದೆಯ ಕೋಣೆಯ ಬಾಗಿಲು ತಟ್ಟಿದಳು. 'ನಾನು ಅಮೆರಿಕಾಗೆ ಹೋಗುತ್ತೇನೆ. ನಾನು ಡಾ॥ ಈಡಾ ಸ್ಕಡರ್ ಆಗಿ ಇಲ್ಲಿಗೆ ಹಿಂತಿರುಗುತ್ತೇನೆ'.

ಈಡಾ ಅಮೆರಿಕಾಗೆ ಹಿಂತಿರುಗಿದಳು. ಭಾರತದ ಮಹಿಳೆಯರಿಗಾಗಿ ವೈದ್ಯ ವಿದ್ಯಾಭ್ಯಾಸ ಮಾಡಿದಳು. ತನ್ನ ಶ್ರೀಮಂತ ದೇಶದ ನೂರೊಂದು ಆಕರ್ಷಣೆಗಳನ್ನು ತೊರೆದು, ಬಡ ದೇಶದ ಬಡ ಮಹಿಳೆಯರಿಗೆ ಆಶಾಕಿರಣವಾಗಿ ಹಿಂತಿರುಗಿ ಬಂದಳು. ಇದೀಗ ಈಡಾ, ಡಾ॥ ಈಡಾ ಸ್ಕಡರ್ ಆಗಿದ್ದಳು. ಅವಳಿಗಾಗಿ ಭಾರತ ಕಾದಿತ್ತು. ಭಾರತದ ಮಹಿಳೆಯರು ಕಾದಿದ್ದರು. ವೆಲ್ಲೂರಿನ 'ಮಿಷನ್ ಹೌಸ್' ಕಾದಿತ್ತು.

ಭಾರತಕ್ಕೆ ಹೊರಟಂತೆ, ಮಿಷಿನರಿ ಬೋರ್ಡಿನ ಕಾರ್ಯದರ್ಶಿ ಹೇಳಿದರು. 'ವೆಲ್ಲೂರಿನಲ್ಲಿ ಒಂದು ಮಹಿಳಾ ಆಸ್ಪತ್ರೆಯನ್ನು ತೆರೆಯಬೇಕು'. ಈಡಾಗೆ ಖುಷಿಯಿಂದ ಕುಣಿದಾಡುವಂತಾಯಿತು. ಎಂಥಾ ಅದ್ಭುತ ವಿಚಾರ, ಮಹಿಳೆಯರಿಗೊಂದು ಆಸ್ಪತ್ರೆ ! ಆದರೆ ಆ ಆಸ್ಪತ್ರೆಗೆ ಈಡಾ ಸ್ವತಃ ಹಣವನ್ನು ಸಂಗ್ರಹಿಸಬೇಕೆಂದು ಕಾರ್ಯದರ್ಶಿ ಹೇಳಿದಾಗ, ಈಡಾಗೆ ಉತ್ಸಾಹ ಜರ್ರನೆ ಜಾರಿತು. ತಾನೆಲ್ಲಿಂದ ಅಷ್ಟು ಹಣವನ್ನು ಕೂಡಿಸಲು ಸಾಧ್ಯ. ಆಸ್ಪತ್ರೆ ತೆರೆಯಲು ಎಂಟು ಸಾವಿರ ಡಾಲರ್ ಹಣ ಬೇಕಿತ್ತು. ಅದು ಆ ಕಾಲಕ್ಕೆ ಬಹಳವಿತ್ತು. ಆದರೆ ಈಡಾ ಪ್ರಯತ್ನಿಸಲು ನಿರ್ಧರಿಸಿದಳು. ತನ್ನ ಕನಸಿನ ಮಹಿಳಾ ಆಸ್ಪತ್ರೆಯನ್ನು ವೆಲ್ಲೂರಿನಲ್ಲಿ ಸ್ಥಾಪಿಸುವ ಸಲುವಾಗಿ, ಈಡಾ ಹಣ ಸಂಗ್ರಹಿಸಲು ಹೊರಟಳು. ಮಹಿಳಾ ಸಂಘಗಳಲ್ಲಿ, ಪುರುಷರ ಸಭೆಗಳಲ್ಲಿ ಈಡಾ ಮಾತನಾಡಿದಳು. ಆದರೆ ಅವಳ ಅಖಂಡ ಪ್ರಯತ್ನಕ್ಕೆ ದೊರೆತದ್ದು ಕೇವಲ ಕೆಲವು ನೂರು ಡಾಲರ್ ಮಾತ್ರ. ಎಂಟು ಸಾವಿರ ಡಾಲರ್ ಗುರಿ ಬಹಳ ದೂರವಿತ್ತು. ಆದರೆ ಈಡಾ ಛಲ ಬಿಡಲು ಸಿದ್ಧವಿರಲಿಲ್ಲ. ಒಂದು ದಿನ ಈಡಾ ಮಿಸ್ ಟೇಬರ್ ಎಂಬಾಕೆಯನ್ನು ಭೇಟಿಯಾದಳು. ಈಡಾ ಮಿಸ್ ಟೇಬರ್ ಜೊತೆ ಮಾತನಾಡುತ್ತಿರುವಂತೆ ಆಕೆಯ ಭಾವ ಮಿ. ಶೆಲ್ ಪಕ್ಕದ ಕೋಣೆಯಲ್ಲಿ ಕುಳಿತು ಈಡಾಳ ಮಾತುಗಳನ್ನು ಕೇಳಿಸಿಕೊಳ್ಳುತ್ತಿದ್ದ. ಈಡಾ ತನ್ನ ಭಾರತದ ಅನುಭವಗಳನ್ನು ಮನ ಕರಗುವಂತೆ ತೆರೆದಿಟ್ಟಳು. 'ಮೂರು ಜನ ಮಹಿಳೆಯರು ಸತ್ತಿದ್ದರು, ಕೇವಲ

ಹದಿಮೂರು, ಹದಿನಾಲ್ಕು ವರ್ಷದ ಹುಡುಗಿಯರು. ನಾನೇನೂ ಮಾಡುವಂತಿರಲಿಲ್ಲ' ಆ ಕತ್ತಲ ರಾತ್ರಿಯ ಕತೆಯನ್ನು ಹಂಚಿಕೊಂಡಳು. ಭಾರತದ ಮಹಿಳೆಯ ಅಸಹಾಯಕ ಬದುಕಿನ ವಿವರಗಳನ್ನು ತೆರೆದಿಟ್ಟಳು. ಅಲ್ಲೊಂದು ಮಹಿಳೆಯರ ಆಸ್ಪತ್ರೆ ಇದ್ದಿದ್ದರೆ, ಬರೀ ಮಹಿಳೆಯರೇ ನಡೆಸುವ ಮಹಿಳಾ ವೈದ್ಯರಿರುವ ಆಸ್ಪತ್ರೆ, ಅದೆಷ್ಟು ಹೆಂಗಸರು ಬದುಕುತ್ತಿದ್ದರು. ಮಿಸ್. ಟೇಬರ್ ಮುಖದ ಭಾವ ಬದಲಾಗಲಿಲ್ಲ. 'ಸೋಮವಾರ ಸಭೆಗೆ ಬಂದು ನನ್ನ ಜನರೊಡನೆ ಮಾತನಾಡು. ಬಹುಶಃ ಕೆಲವು ನೂರು ಡಾಲರ್ ಕೂಡಿಸಿ ಕೊಡಬಲ್ಲೆವು' ನಿರ್ಭಾವುಕವಾಗಿ ಹೇಳಿ ಈಡಾಳನ್ನು ಬೀಳ್ಕೊಟ್ಟರು. ಕೆಲವು ನೂರು ಡಾಲರ್ ಈಡಾಗೆ ಯಾವ ಮೂಲೆಗೂ ಸಾಲದಿತ್ತು.

ಮರುದಿನ ಈಡಾಳ ಮೇಜಿನ ಮೇಲೊಂದು ಪತ್ರ ! ಮಿ. ಶೆಲ್ ಆಕೆಯನ್ನು ನೋಡಲು ಬಯಸಿದ್ದ. ಈಡಾ ಮಿ. ಶೆಲ್ ಬಳಿಗೆ ಹೋದಳು. ಆತ ಹೇಳಿದ 'ನಿಮ್ಮ ಮಾತುಗಳನ್ನು ಕೇಳಿಸಿಕೊಂಡೆ, ಕುತೂಹಲವಾಯಿತು. ನಾ ಮತ್ತಷ್ಟು ತಿಳಿಯಬಯಸುತ್ತೇನೆ'. ಈಡಾ ಹೃದಯದಷ್ಟೇ ಮಿದುಳನ್ನೂ ಬಳಸಿ, ಅಂಕಿಸಂಖ್ಯೆಗಳೊಡನೆ ಭಾರತದ ಮಹಿಳೆಯ ವಾಸ್ತವ ಸ್ಥಿತಿಯನ್ನು ವಿವರಿಸಿದಳು. ಅಲ್ಲಿಯ ವಾತಾವರಣ, ಮಣ್ಣು, ಮಳೆ ಎಲ್ಲವನ್ನು ತಿಳಿಸಿದಳು. ಮಹಿಳಾ ಆಸ್ಪತ್ರೆಯ ಅಗತ್ಯವನ್ನು ಒತ್ತಿ ಹೇಳಿದಳು. 'ಈಗಷ್ಟೇ ವೈದ್ಯ ಪದವಿ ಪಡೆದು ಹೊರಬಂದ ಈ ಎಳೆಯ ಹುಡುಗಿ ಒಂದು ಆಸ್ಪತ್ರೆಯನ್ನು ಕಟ್ಟಿ ನಿಲ್ಲಿಸುವಳೆ' ಮಿ. ಶೆಲ್ ಅನುಮಾನಿಸಿದ. ಈಡಾ ''ನನ್ನ ಮೆಡಿಕಲ್ ಕಾಲೇಜಿನ ರೆಕಾರ್ಡ್ ನೋಡಿರಿ, ತನ್ನ ತಂದೆ ನುರಿತ ವೈದ್ಯರು, ನನ್ನ ಬೆಂಬಲಕ್ಕಿದ್ದಾರೆ' ಆತುರದಿಂದ ವಿವರಿಸಿದಳು. ಮೆಲ್ಲನೆ ಮಿ. ಶೆಲ್ 'ನನ್ನ ಪ್ರೀತಿಯ ಮಡದಿ ಮೇರಿ ಟೇಬಲ್ ಶೆಲ್ ನೆನಪಿಗೆ ನನ್ನ ಕೊಡುಗೆ ಇದು' ಎಂದು ಚೆಕ್ ಪುಸ್ತಕ ಹೊರ ತೆಗೆದ. ಮತ್ತೆ ತಲೆ ಎತ್ತಿ ಹೇಳಿದ 'ಎಂಟು ಸಾವಿರ ಡಾಲರ್ ಎಂದೆಯಲ್ಲವೆ? ಇದು ನಿಜಕ್ಕೂ ಅತ್ಯುತ್ತಮ ಆಸ್ಪತ್ರೆ ಆಗಬೇಕೆಂಬುದು ನನ್ನ ಆಸೆ....' ಚೆಕ್ ಬರೆದು ಕೈಗಿಟ್ಟ, ಅದರಲ್ಲಿ 'ಹತ್ತು ಸಾವಿರ ಡಾಲರ್' ಎಂದು ಬರೆದಿತ್ತು. ಈಡಾ ದಿಗ್ಮೂಢಳಾಗಿ ನಿಂತು ಬಿಟ್ಟಳು.

ಭಾರತಕ್ಕೆ ಹಿಂತಿರುಗಿದ ಈಡಾ ಸಣ್ಣ ಡಿಸ್ಪೆನ್ಸರಿ ತೆರೆದಳು. ತಂದೆಯ ಜೊತೆಯಲ್ಲಿ ಕೆಲಸ ಮಾಡುತ್ತಾ ಜನರಿಗೆ ತನ್ನ ಪರಿಚಯ ನೀಡಿದಳು, ತಂದೆಗೆ ಶಸ್ತ್ರಕ್ರಿಯೆಯಲ್ಲಿ ಸಹಾಯ ಮಾಡಿದಳು. ಆದರೆ ಒಂದು ದಿನ ಇದ್ದಕ್ಕಿದ್ದಂತೆ ಡಾ|| ಜಾನ್ ತೀರಿಕೊಂಡರು. ಈಡಾ ಪೂರ್ಣ ಏಕಾಂಗಿಯಾದಳು. ತನ್ನ ಪ್ರೀತಿಯ ತಂದೆಯನ್ನು, ತನಗೆ ವೈದ್ಯ ರಂಗದಲ್ಲಿ ಮಾರ್ಗದರ್ಶಿಸುತ್ತಿದ್ದ ಗುರುವನ್ನು ಕಳೆದುಕೊಂಡಿದ್ದಳು. ಕಣ್ಣ ಕಂಬನಿ ಒರೆಸಿಕೊಂಡು ತಂದೆ ಬಿಟ್ಟಲ್ಲಿಂದ ದೀವಟಿಗೆ ಹಿಡಿದು ಹೊರಟಳು. ಡಿಸ್ಪೆನ್ಸರಿ ತೆರೆದು ಕುಳಿತಳು. ಆದರೆ ಯಾರೊಬ್ಬರೂ ಬರಲಿಲ್ಲ. ಕಾರಣ ಈಡಾ ಮಹಿಳೆ, ವೈದ್ಯಳು ಹೇಗಾದಳು ? ಈಡಾ ಈಗ ಚಡಪಡಿಸತೊಡಗಿದಳು. ಇದೀಗ ಆಕೆಯ ಕೈಯಲ್ಲಿ ರೋಗಿಗಳನ್ನು ಗುಣಪಡಿಸುವ ಶಕ್ತಿ ಇತ್ತು, ಆದರೆ ಯಾರೊಬ್ಬರೂ ಆಕೆಯಲ್ಲಿಗೆ ಬರುತ್ತಿರಲಿಲ್ಲ. ಒಂದು ದಿನ ಡಿಸ್ಪೆನ್ಸರಿ ತೆಗೆದು ಕಾಯುತ್ತಿರುವಂತೆ, ಒಂದು ಬಣ್ಣ ಬಣ್ಣದ ಕುದುರೆ ಗಾಡಿ ಬಂದು ನಿಂತಿತು. ಗಾಡಿಯ ಪರದೆ ಸರಿದು, ಓರ್ವ ಮಹಿಳೆ ಕೆಳಗಿಳಿದಳು. ರೇಷ್ಮೆಯ ಸೀರೆ, ತೊಟ್ಟ ಚಿನ್ನದ ಆಭರಣಗಳು. ಅಲ್ಪ ಸ್ವಲ್ಪ ತಮಿಳು ಕಲಿತಿದ್ದ ಈಡಾ 'ನಮಸ್ತೆ ಅಮ್ಮಾಳ್, ನಾನು ಇಲ್ಲಿಯ ಡಾಕ್ಟರ್, ಒಳಗೆ ಬನ್ನಿ' ಕರೆದಳು. ಆ ಹೆಂಗಸಿನ ಕಣ್ಣಿಗೆ ಒಂದು ಬ್ಯಾಂಡೇಜ್ ಕಟ್ಟಿತ್ತು. ಬ್ಯಾಂಡೇಜ್ ತೆಗೆದು ಊದಿಕೊಂಡ ಕಣ್ಣುಗಳನ್ನು ಪರೀಕ್ಷಿಸಿದಳು. ರೋಗವನ್ನು ಪತ್ತೆ ಮಾಡಿದಳು. ಔಷಧಿ ನೀಡಿ, ಬಳಸುವ ವಿಧಾನವನ್ನು ಹೇಳಿ, ಮರುದಿನ ಬರಲು ತಿಳಿಸಿದಳು.

ಮರು ದಿನ ಆ ಹೆಂಗಸು ಬಂದಳು. ಮತ್ತೆರಡು ದಿನವೂ ಬಂದಳು. ಈ ಬಾರಿ ತನ್ನೊಡನೆ ಮತ್ತೊಬ್ಬ ಮಹಿಳೆಯನ್ನು ಕರೆತಂದಳು. ಕೆಲವೇ ದಿನಗಳಲ್ಲಿ ಡಿಸ್ಪೆನ್ಸರಿಯ ಬಾಗಿಲು ತೆರೆಯುವ ಮೊದಲೇ, ಅಲ್ಲಿ ಹೆಂಗಸರು, ಗಂಡಸರು ಕಾದು ಸಾಲು ಕುಳಿತಿರುತ್ತಿದ್ದರು. ಆದರೂ ಈಡಾಳ ಮನಸ್ಸನ್ನು ಗೋಡೆಯ ರಂಧ್ರದಿಂದ ಹೊರ ಬಿದ್ದ ಆ ಕೃಶವಾದ ಕೈ ಕಾಡುತ್ತಿತ್ತು. ಮಂತ್ರ, ತಂತ್ರ, ಭೂತ ಪ್ರೇತಗಳ ಮೊರೆ ಹೊಕ್ಕು ಮೂಢ ನಂಬಿಕೆಯ ಕತ್ತಲೆಯಲ್ಲಿ ವೈದ್ಯರಂಗದ ಲಾಭ ಪಡೆಯದ ಮಹಿಳೆಯರ ಪರದೆಯ ಹಿಂದಿನ ಬದುಕು ಕಾಡುತ್ತಿತ್ತು.

ಒಂದು ದಿನ ಓರ್ವ ಶ್ರೀಮಂತ ಮನುಷ್ಯ ಓಡೋಡಿ ಬಂದ. 'ಡಾಕ್ಟರ್ ಅಮ್ಮಾಳ್, ನನ್ನ ಪತ್ನಿಗೆ ಹೆರಿಗೆ ಆಗಬೇಕಿದೆ. ಆಕೆಗೆ ಮೈ ಹುಷಾರಿಲ್ಲ. ಎಳೆಯ ಪ್ರಾಯದ ಹುಡುಗಿ..' ತಟ್ಟನೆ ಈಡಾಗೆ ಆ ರಾತ್ರಿಯ ಮೂರು ಮಹಿಳೆಯರ ಸಾವುಗಳು ನೆನಪಾದವು. ಆಗ ಅವಳೇನೂ ಮಾಡುವಂತಿರಲಿಲ್ಲ. ಇದೀಗ ಮತ್ತೊಂದು ಅವಕಾಶ ದೊರೆತಿದೆ, ಬುಡಬುಡನೆ ಓಡಿದಳು. ಕುದುರೆಯ ಗಾಡಿಯಲ್ಲಿ ಆ ಮನುಷ್ಯ ಕರೆದೊಯ್ದ. ಮನೆಯ ಒಳಗೆ ಹೊಕ್ಕಾಗ, ಕತ್ತಲೆಯ ಕೂಪಕ್ಕೆ ಇಳಿದಂತಾಯ್ತು. ಹೆರಿಗೆ ಮೈಲಿಗೆಯ ವಿಷಯ, ಕತ್ತಲಲ್ಲಿ ನಡೆಯಬೇಕು ಎಂಬ ನಂಬುಗೆ ಅವರದು. ಹಿಂಬದಿಯ ಸಣ್ಣ ಕೋಣೆಗೆ ಚಾಪೆಯ ಮೇಲೆ ಬಿದ್ದುಕೊಂಡ ಹುಡುಗಿ ಒಣಗಿದ ತುಟಿಯಲ್ಲಿ, ಏರಿ ನಿಂತ ಜ್ವರದಲ್ಲಿ ಒದ್ದಾಡುತ್ತಿದ್ದಳು. ತನ್ನ ಹರುಕು ತಮಿಳಿನಲ್ಲಿ 'ನೀರು ತರುವಂತೆ' ಆಜ್ಞಾಪಿಸಿದಳು. ಆದರೆ ಅವರಾರೂ ನೀರು ಕೊಡಲು ಸಿದ್ಧರಿರಲಿಲ್ಲ. ಹೆರಿಗೆಯ ನೋವಿನಲ್ಲಿರುವ ಹುಡುಗಿಗೆ ನೀರು ಕೊಡಬಾರದೆಂಬ ಮೂಢನಂಬಿಕೆ ಅವರದು. ಹುಡುಗಿ ಬಾಯಾರಿಕೆಯಿಂದಲೇ ಸಾಯಲಿದ್ದಳು. ಹೊರಗೆ ಹೋದವಳೇ ಈಡಾ ಗಂಡಸರನ್ನು ತರಾಟೆಗೆ ತೆಗೆದುಕೊಂಡಳು. 'ನಿಮಗೆ ಹುಡುಗಿ ಬದುಕುವುದು ಮುಖ್ಯವೋ, ನಿಮ್ಮ ನಂಬಿಕೆಗಳೇ ಮುಖ್ಯವೋ. ನನಗೆ ತಕ್ಷಣ ನೀರು ತಂದು ಕೊಡಿ'. ಕಡೆಗೂ ನೀರು ಬಂತು. ಮೆಲ್ಲನೆ ಹುಡುಗಿಯ ಒಣಗಿದ ತುಟಿಗಳು ಒದ್ದೆಯಾದವು. ಸಂಜೆಯ ಹೊತ್ತಿಗೆ ಹುಡುಗಿ ಹಡೆದಳು, ಗಂಡು ಮಗು ಜನಿಸಿತು.

ಈಡಾ ಹಿಂತಿರುಗಿದಾಗ, ಆಕೆಗೆ ಡಿಸ್ಪೆನ್ಸರಿಯಲ್ಲಿ ಸಹಾಯ ಮಾಡುತ್ತಿದ್ದ ಅಡಿಗೆಯವಳು ಸಲೋಮಿ ಹೇಳಿದಳು 'ಊದಿದ ಕಣ್ಣಿನಾಕೆ ಬಂದಿದ್ದಳು, ನಾನು ಈ ದ್ರಾವಣ ನೀಡಿದೆ'. 'ನಿನಗೆ ಹೇಗೆ ಗೊತ್ತು ಸಲೋಮಿ, ಆ ದ್ರಾವಣದಿಂದ ಕಣ್ಣು ನೋವು ವಾಸಿಯಾಗುತ್ತೆ ಅಂತಾ' ಈಡಾ ಅಚ್ಚರಿಯಿಂದ ಕೇಳಿದಳು. 'ನೀವು ರೋಗಿಗಳನ್ನು ಪರೀಕ್ಷಿಸುವುದನ್ನು, ಈ ದ್ರಾವಣ .ಕೊಡುವುದನ್ನು

ಗಮನಿಸಿದ್ದೆ' ಸಲೋಮಿ ಉತ್ತರಿಸಿದಳು. ತಟ್ಟನೆ ಈಡಾಗೆ ಏನೋ ಹೊಳೆಯಿತು. 'ಸಲೋಮಿ ಅಡಿಗೆ ಮನೆಯಲ್ಲಿ ಕೆಲಸ ಮಾಡುವ ಬದಲು ನನಗೆ ಇಲ್ಲಿ ಡಿಸ್ಪೆನ್ಸರಿಯಲ್ಲಿ ಸಹಾಯಕಳಾಗುವೆಯಾ?' ಈಡಾ ಕೇಳಿದಳು. ಸಲೋಮಿ ಖುಷಿಯಿಂದ ಒಪ್ಪಿದಳು.

ಕಡೆಗೂ ಈಡಾಳ ಕನಸು ನನಸಾಯಿತು. ಮಹಿಳಾ ಆಸ್ಪತ್ರೆ ತೆರೆಯಿತು. ನಲವತ್ತು ಬಿಳಿಯ ಹಾಸಿಗೆಗಳು ಎರಡು ವಾರ್ಡಿನಲ್ಲಿ ಸಾಲಾಗಿ ನಿಂತಿದ್ದವು. ಶಸ್ತ್ರಚಿಕಿತ್ಸೆಯ ಕೊಠಡಿಯಲ್ಲಿ ಹೊಸ ಸಲಕರಣಗಳು. ಆಸ್ಪತ್ರೆಯನ್ನು 'ಮೇರಿ ಟೇಬರ್ ಶೆಲ್ ಆಸ್ಪತ್ರೆ' ಎಂದು ಕರೆಯಲಾಗಿತ್ತು. ಆಸ್ಪತ್ರೆಯ ಆಷ್ಟೂ ಉಸ್ತುವಾರಿ ಈಡಾಳದು. ಈಡಾಗೆ ಇದ್ದ ಏಕಮಾತ್ರ ಸಹಾಯಕಿ - ಸಲೋಮಿ ! ಈಡಾ ಮುಂಜಾವಿನಿಂದ ಮಧ್ಯರಾತ್ರಿಯವರೆಗೂ ದುಡಿಯುವಳು. ಹಲವು ಬಾರಿ ರಾತ್ರಿ ಇಡೀ ಕೆಲಸ ಮಾಡುವಳು. ನಂತರದ ದಿನಗಳಲ್ಲಿ ಹೆಚ್ಚು ಹೆಚ್ಚು ದಾದಿಗಳು ಸೇರಿಕೊಂಡಂತೆ, ಸಲಹೆ ಕೇಳಲು, 'ತಕ್ಷಣ ಬರಬೇಕೆಂದು' ಕರೆದೊಯ್ಯಲು ದೀಪ ಹಿಡಿದು ರಾತ್ರಿ ಇಡೀ ಬರುತ್ತಿದ್ದರು, ಎಬ್ಬಿಸುತ್ತಿದ್ದರು.

ಆಸ್ಪತ್ರೆ ಬೆಳೆದು ನಿಂತಿತು. ಈಡಾಳ ಬದುಕಿನಲ್ಲಿ ಮತ್ತೊಂದು ಅಧ್ಯಾಯ ಆರಂಭವಾಯಿತು. ಒಂದು ರಾತ್ರಿ ಆದೆಷ್ಟೋ ಗಂಟೆಗಳು ಹೋರಾಡಿ ಓರ್ವ ಮುಸ್ಲಿಮ್ ಬಸುರಿ ಹುಡುಗಿಯನ್ನು ಬದುಕಿಸಿದಳು. ಹೆಣ್ಣು ಮಗು ಹುಟ್ಟಿತು. ಮಗುವಿನ ಜನನ ಖುಷಿ ತರುತ್ತದೆ ಎಂದು ಹೊರ ಬಂದು ಸಂಭ್ರಮದಿಂದ ತಿಳಿಸಿದರೆ, ಹೆಣ್ಣು ಹುಟ್ಟಿತೆಂದು ಮುಖ ಗಂಟು ಹಾಕಿಕೊಂಡ ಜನ. ಮರುದಿನ ಏಕೋ ಈಡಾಗೆ 'ಎಲ್ಲ ಸರಿ ಇಲ್ಲ' ಎಂಬ ಇರುಸು ಮುರುಸಿನ ಭಾವ. ತಟ್ಟನೆ ಈಡಾ ಮಗುವಿನ ಕೋಣೆಗೆ ಓಡಿದಳು. ಮಗುವಿನ ಅಜ್ಜಿ ಮುಖಕ್ಕೆ ದಿಂಬು ಇಟ್ಟು ಉಸಿರುಕಟ್ಟಿಸುತ್ತಿರುವ ದೃಶ್ಯ ಕಂಡು ಬೆಚ್ಚಿ ಬಿದ್ದಳು. 'ನಿಲ್ಲಿಸಿ ಎಂಥಾ ಕೆಲಸ ಮಾಡುತ್ತಿದ್ದೀರಿ? ಈಡಾ ಕೂಗಿದಳು. 'ಅದು ಸತ್ತರೆ ಒಳ್ಳೆಯದು. ನಿನಗೆ ಈ ಮಗು ಅಷ್ಟು ಮುಖ್ಯವಿದ್ದರೆ ನೀನೇ ಇಟ್ಟುಕೋ, ಅಲ್ಲಿದ್ದವರೆಲ್ಲ ಮಟ್ಟ ಸ್ವರದಲ್ಲಿ ಹೇಳಿದರು. ಮಗುವಿನ ತಾಯಿಯ ಅಸಹಾಯಕ ಕಣ್ಣುಗಳು ಬೇಡುತ್ತಿದ್ದವು. 'ಸರಿ ಈ ಮಗುವನ್ನು ನಾನೇ ಇಟ್ಟುಕೊಳ್ಳುತ್ತೇನೆ' ಈಡಾ ನುಡಿದಳು. ಪುಟ್ಟ ಕೂಸನ್ನು ಬಟ್ಟೆಯಲ್ಲಿ ಸುತ್ತಿಕೊಂಡು ಹೊತ್ತು ನಡೆದಳು, ಮಗುವಿಗೆ ಮೇರಿ ಟೇಬರ್ ಎಂದು ಹೆಸರಿಟ್ಟಳು.

ಮೇರಿ ಟೇಬರ್, ಈಡಾ ಬದುಕು ಕೊಟ್ಟ ಮೊಟ್ಟ ಮೊದಲ 'ಅನಾಥ' ಶಿಶು. ವರ್ಷ ವರ್ಷಗಳ ನಂತರ ವೆಲ್ಲೂರಿನಿಂದ ಹೊರಗೆಲ್ಲಾದರೂ ಹೋಗಿ ಈಡಾ ಹಿಂತಿರುಗಿದಾಗ, ಅಂಗಳಕ್ಕೆ ಪ್ರವೇಶಿಸಲಿಕ್ಕಿಲ್ಲ, 'ಡಾಕ್ಟರ್ ಅಮ್ಮ ಬಂದರು, ಡಾಕ್ಟರ್ ಅಮ್ಮ ಬಂದರು' ಎಂದು ಕುಣಿಯುತ್ತಾ ಓಡೋಡಿ ಬರುವ ಆದೆಷ್ಟೋ ಕಂದು ಬಣ್ಣದ ಮಕ್ಕಳು, ಏರಿ ಎಗರಿ ಮೇಲೆ ಬಿದ್ದು ಈಡಾಳನ್ನು ಅಪ್ಪಿ ಮುತ್ತಿಡುತ್ತಿದ್ದವು. ಈಡಾಳ ಆಶ್ರಯಕ್ಕೆ ಬಿದ್ದ ಮಕ್ಕಳು ಲೆಕ್ಕವಿಲ್ಲದಷ್ಟು. ಈಡಾ ಆ ಮಕ್ಕಳೆಲ್ಲರನ್ನು ತನ್ನ ಹೃದಯ ತುಂಬಿ ಪ್ರೀತಿಸಿದಳು. ಅವುಗಳನ್ನು ಭಾರತೀಯ ತಾಯಂದಿರು ಕಂಕುಳಲ್ಲಿ ಎತ್ತಿಕೊಳ್ಳುವಂತೆ ಎತ್ತಿಕೊಳ್ಳುವಳು. ಹಳ್ಳಿಗಳಿಗೆ ತನ್ನ ಕೆಲಸದ ಮೇಲೆ ಹೋಗಿ, ಹಿಂತಿರುಗುವಾಗ, ಬುಟ್ಟಿಯ ತುಂಬಾ ಮಾವಿನ ಹಣ್ಣು ಹೊತ್ತು ತರುವಳು. ಬೋಗನ್‌ವಿಲ್ಲಾ ಹೂಗಳ ಬಣ್ಣ ಬಣ್ಣದ ಗೊಂಚಲು ಹಿಡಿದು ಬರುವಳು.

ತಟ್ಟನೆ ಒಂದು ದಿನ ಆಸ್ಪತ್ರೆ ಖಾಲಿಯಾಗಿತ್ತು. ವೆಲ್ಲೂರಿಗೆ ಪ್ಲೇಗ್ ಬಡಿದಿತ್ತು. ಕುಟುಂಬಗಳು ಮನೆಯಲ್ಲಿ ಅವಿತು ಕುಳಿತು, ಸಾಯುತ್ತಿರುವವರಿಗೆ ಚಿಕಿತ್ಸೆ ನೀಡಲು ಬಂದ ಈಡಾಳನ್ನು ಹತ್ತಿರ ಸುಳಿಯಗೊಡಲಿಲ್ಲ. 'ಇವರೆಲ್ಲರಿಗೆ ಚುಚ್ಚು ಮದ್ದು ತೆಗೆದುಕೊಳ್ಳಲು ತಯಾರಿರಲಿಲ್ಲ. ಚುಚ್ಚು ಮದ್ದು ತೆಗೆದುಕೊಂಡರೆ ಪ್ಲೇಗ್ ದೇವತೆಗೆ ಕೋಪ ಬರುವುದೆಂಬ ಮೂಢನಂಬಿಕೆ ದಟ್ಟವಿತ್ತು. ಪ್ಲೇಗಮ್ಮನಿಗೆ ಹಗಲು ರಾತ್ರಿ, ಬಡವರು ಶ್ರೀಮಂತರು ಬಲಿ ಕೊಡತೊಡಗಿದ್ದರು. 'ಪ್ಲೇಗನ್ನು ಒಂದು ಸೂಜಿ ಮದ್ದಿನಿಂದ ನಿಲ್ಲಿಸಲು ಸಾಧ್ಯವೆ ?' ನಂಬಲು ಅವರು ಸಿದ್ಧವಿರಲಿಲ್ಲ. ಆದರೆ ಬಲಿಯಿಂದ ಪ್ಲೇಗ್ ನಿಲ್ಲಲಿಲ್ಲ. ಈಡಾ ಮನೆ ಮನೆಗೆ ಹೋಗುವಳು, ರೋಗಿಗಳಿಗೆ ಚಿಕಿತ್ಸೆ ನೀಡಲು ಅವಕಾಶ ಕೊಡುವಂತೆ ಬೇಡುವಳು. ವಾದಿಸುವಳು, ಮನ ಒಲಿಸಲು ನೋಡುವಳು. ಹೆಲ್ತ್ ಆಫೀಸರ್ ಜೊತೆ ಜೊತೆಯಲ್ಲಿ ಮನೆಗಳನ್ನು ಸೋಂಕು ನಿವಾರಿಸಲು, ರೋಗವನ್ನು ತಡೆಯಲು ಹೆಣಗಾಡಿದಳು. ಕಡೆಗೊಂದು ದಿನ ಒಬ್ಬಾತ ಓಡಿ ಬಂದ. 'ಡಾಕ್ಟರ್ ಅಮ್ಮಾಳ್ ನನ್ನ ಪುಟ್ಟ ತಮ್ಮನಿಗೆ ಸೂಜಿ ಚುಚ್ಚಿದೆ. ಅವ ಈಗ ಚೆನ್ನಾಗಿದ್ದಾನೆ. ನನ್ನ ಮಗಳಿಗೆ ರೋಗ ಬಡಿದಿದೆ. ದಯವಿಟ್ಟು ಅವಳನ್ನು ಉಳಿಸು'. ಇಂಥಾ ಅವಕಾಶಕ್ಕಾಗಿ ಕಾದಿದ್ದ ಈಡಾ ಓಡಿದಳು. ಮನೆಮಂದಿಗೆಲ್ಲ ರೋಗನಿರೋಧಕ ಚುಚ್ಚುಮದ್ದು ಹಾಕಿದಳು. ಸೋಂಕು ತಾಗಿದ ಬಟ್ಟೆಗಳನ್ನೆಲ್ಲ ಸುಟ್ಟಳು. ಮನೆಯ ಸೋಂಕು ಕಳೆದಳು. ಕೆಲವು ದಿನಗಳ ನಂತರ ಆ ಮನುಷ್ಯ ತನ್ನ ಸ್ನೇಹಿತನಿಗೆ ಇನಾಕ್ಯುಲೇಷನ್ ಹಾಕಲು ಕರೆತಂದ. ಕೆಲವೇ ದಿನದಲ್ಲಿ ಸ್ನೇಹಿತನ ಇಡೀ ಕುಟುಂಬ ಬಂದಿತು. ಈಡಾಗೆ ಮೆಲ್ಲನೆ ಅರಿವಾಗಿತ್ತು. ಸಮಯ ಹಿಡಿಸುತ್ತದೆ, ಈ ಜನರ ಮನ ಒಲಿಸಲು ಬಹಳಷ್ಟು ಸಮಯ ಹಿಡಿಸುತ್ತದೆ. ಆದರೆ ಒಂದಲ್ಲ ಒಂದು ದಿನ ಇವರೆಲ್ಲರಿಗೂ ಕಲಿಸಬಹುದು. ಇವರೆಲ್ಲರಿಗೂ ಇದು 'ತಡೆಗಟ್ಟಬಲ್ಲ ರೋಗ'ವೆಂದು ಅರ್ಥ ಮಾಡಿಸಬೇಕು.

ಈಡಾ ತನ್ನ ಹಳ್ಳಿಯ ಓಡಾಟದ ಅನುಕೂಲಕ್ಕೆ ಒಂದು ಮೋಟಾರು ಕಾರು ಪಡೆದಿದ್ದಳು. ಆದರೆ ಆಲದ ಮರದ ನೆರಳಲ್ಲಿ ಕಾದ ಹಳ್ಳಿಯ ಜನ ದೂರದಲ್ಲಿ ಕೇಳಿ ಬಂದ ಕಾರಿನ ಚಕ್ರದ ಉರುಳುವ ಗುಡು ಗುಡು ಸದ್ದಿಗೆ ಹೆದರಿ ಭಯಭೀತರಾಗಿ ಓಡಿ ಅವಿತುಕೊಂಡರು. ಅವರೆಂದೂ ಮೋಟಾರು ಗಾಡಿಯನ್ನು ಕಂಡಿರಲಿಲ್ಲ. ಈ ಕಪ್ಪು ಕಾರು ಅವರಿಗೆ 'ಭೂತದ ಗಾಡಿ'ಯಾಗಿ ಕಂಡಿತು. ಕಡೆಗೂ ಕಾರು ಅಸಾಧ್ಯ ಸದ್ದಿನೊಡನೆ ಬುಸುಗುಟ್ಟಿ ನಿಂತಿತು. ಈಡಾ ಅದರೊಳಗಿಂದ ಇಳಿದು ಹೊರ ಬಂದಳು. ಮೆಲ್ಲನೆ ಅವಿತ ಜನ ಒಬ್ಬೊಬ್ಬರಾಗಿ ಹೊರ ಬಂದರು. ಆ ಕಾರು ಈಡಾಳ ಸಂಚಾರಿ ಆಸ್ಪತ್ರೆಯಾಗಿತ್ತು. ಈಡಾ ಬೆಳಗ್ಗೆ ಆರು ಗಂಟೆಗೇ ಹೊರಟು, ಪ್ರತಿ ಹಳ್ಳಿಗೂ ನಿಯಮಿತವಾಗಿ ಭೇಟಿ ಕೊಡುವಳು. ಹಿಂತಿರುಗುವಾಗ, ರಾತ್ರಿ ಬಹಳ ಹೊತ್ತಾಗಿರುತ್ತಿತ್ತು. ಜನರಿಗೆ ಚಿಕಿತ್ಸೆ ನೀಡುವ ಈಡಾಳ ಬಳಿಗೆ, ತಮ್ಮ ರೋಗಿಷ್ಟ ಹಸು ಎತ್ತುಗಳನ್ನೂ

ಕರೆತಂದು ಚಿಕಿತ್ಸೆ ಬೇಡುವ ಜನರಿದ್ದರು. ಅವಕ್ಕೂ ಚಿಕಿತ್ಸೆ ನೀಡಿ, ಶಸ್ತ್ರ ಚಿಕಿತ್ಸೆ ಮಾಡಿದ ಸಂದರ್ಭಗಳಿದ್ದವು. ಬಹಳ ಬೇಗನೇ ಹಳ್ಳಿಯ ಜನ ಈಡಾಳಿಗಾಗಿ ಕಾಯತೊಡಗಿದರು, ಅವಳನ್ನು ನಂಬತೊಡಗಿದಳು. ಅವಳ ಕಪ್ಪು ಕಾರು ಈಗ ಭಯದ ದೃಶ್ಯವಾಗಿರಲಿಲ್ಲ, ಭರವಸೆಯ ವಾಹನವಾಗಿತ್ತು. ಅವಳ 'ಭೂತದ ಗಾಡಿ'ಗಾಗಿ ಊರ ಅರಳಿ ಕಟ್ಟೆಯ ಅಡಿಯಲ್ಲಿ ಕಾದು ನಿಂತ ಸಾಲು ಸಾಲು ಹೆಂಗಸರು, ಗಂಡಸರು, ಮಕ್ಕಳು.

ದಿನ ದಿನವೂ ಸಾಲು ನಿಂತ ರೋಗಿಗಳ ಸಂಖ್ಯೆ ಏರುತ್ತಿತ್ತು. ಮೈಲಿ ಮೈಲಿ ದೂರದಿಂದ ವೆಲ್ಲೂರಿನ ಕೆಂಪು ಇಟ್ಟಿಗೆಯ ಆಸ್ಪತ್ರೆಗೆ, ಬಿಳಿಯ ತೊಗಲಿನ ಡಾಕ್ಟರಮ್ಮನಿಂದ ಚಿಕಿತ್ಸೆ ಪಡೆಯಲು ಬರುವ ಜನರ ಸಂಖ್ಯೆ ಏರಿತು. ಹಗಲಿಡೀ ದುಡಿವ ಈಡಾಗೆ ಕೆಲವೊಮ್ಮೆ ಬೆಳಗಿನ ಉಪಹಾರ ತೆಗೆದುಕೊಳ್ಳಲು ಸಮಯ ಸಿಗುತ್ತಿದ್ದುದು, ಮಧ್ಯಾಹ್ನ ಎರಡು ಗಂಟೆಗೆ! 'ನಮಗೆ ಹೆಚ್ಚು ಮಂದಿ ವೈದ್ಯರು ಬೇಕು' ಈಡಾ ಯೋಚಿಸಿದಳು. 'ಆದರೆ ಅಮೆರಿಕಾದಿಂದ ಬರುವ ವೈದ್ಯರಲ್ಲ. ಭಾರತೀಯರ ಸಮಸ್ಯೆಗೆ ಪರಿಹಾರವಾಗಿ ಭಾರತೀಯ ವೈದ್ಯರು ಬೇಕು' ಈಡಾ ಮತ್ತಷ್ಟು ಚಿಂತಿಸಿದಳು. 'ಭಾರತೀಯ ಮಹಿಳಾ ವೈದ್ಯರು' ಈಡಾ ಮುಂದಿನ ಗುರಿಯಾಗಿತ್ತು. 'ಭಾರತೀಯ ಮಹಿಳಾ ವೈದ್ಯರೆ?' ಸ್ನೇಹಿತರು ಅಚ್ಚರಿಯಿಂದ ಕಣ್ಣರಳಿಸಿದರು. 'ಮಹಿಳೆಯರ ಮಿದುಳು ಪುರುಷರಷ್ಟೇ ಚೆನ್ನಾಗಿದೆ. ಭಾರತೀಯ ಹೆಂಗಸರು ಅಮೆರಿಕದ ಹೆಂಗಸರಿಗಿಂತ ಯಾವ ರೀತಿಯಲ್ಲೂ ಕಡಮೆ ಇಲ್ಲ' ಈಡಾ ವಾದಿಸಿದಳು. ಈಡಾ ಬದುಕಿನಲ್ಲಿ ಅವಕಾಶಗಳಿಗೆ ಕಾದು ಕುಳಿತವಳಲ್ಲ. ಹೆಜ್ಜೆ ಮೂಡದ ಹಾದಿಯಲ್ಲಿ ನಡೆದವಳು, ತನ್ನದೇ ದಾರಿಯನ್ನು ಮಾಡಿಕೊಂಡು ಹೊರಟವಳು.

ಕೆಲವೇ ತಿಂಗಳಲ್ಲಿ ಈಡಾ ಮದ್ರಾಸಿಗೆ ರೈಲು ಹಿಡಿದು ಹೊರಟಳು. ಬ್ರಿಟಿಷ್ ಮೆಡಿಕಲ್ ವಿಭಾಗದ ಮುಖ್ಯಸ್ಥ ಕರ್ನಲ್ ಬ್ರೈಸನ್ 'ಮೆಡಿಕಲ್ ಡಿಪ್ಲೊಮಾ' ಪಡೆಯಲು ತರಪೇತು ನೀಡುವ ಮೆಡಿಕಲ್ ಶಾಲೆ ತೆರೆಯಬೇಕಿದೆ' ಹೇಳಿದಳು. 'ನಿನ್ನ ಬಳಿ ಒಂದು ಕಟ್ಟಡ ಕೂಡಾ ಇಲ್ಲ, ಅದು ಹೇಗೆ ಸಾಧ್ಯ?' ವ್ಯಂಗ್ಯವಾಗಿ ಕರ್ನಲ್ ನುಡಿದ. 'ಹತ್ತಿರದ ಮನೆಗಳನ್ನು ಬಾಡಿಗೆಗೆ ತೆಗೆದುಕೊಳ್ಳುವೆ' ಈಡಾ ನುಡಿದಳು. 'ನಿನ್ನ ಬಳಿ ಹಣವಿಲ್ಲ' ವಾದಿಸಿದ. 'ಸಂಗ್ರಹಿಸುವೆ..' ಈಡಾಳ ಛಲ ಬಿಡದ ಉತ್ತರ. 'ನಿನ್ನಲ್ಲಿ ತರಪೇತು ನೀಡಲು ಸಿಬ್ಬಂದಿ ಎಲ್ಲಿದ್ದಾರೆ?' ಪ್ರಶ್ನಿಸಿದ. 'ನನಗೆ ತರಪೇತು ನೀಡಲು ಬರುತ್ತದೆ. ನನ್ನ ದಾದಿ ಅನಾಟಮಿಯಲ್ಲಿ ಸಹಾಯ ಮಾಡುತ್ತಾಳೆ. ಹುಡುಗಿಯರಿಗೆ ವೆಲ್ಲೂರಿನ ಮಿಷಿನ್ ಕಾಲೇಜಿನಲ್ಲಿ ಭೌತಶಾಸ್ತ್ರ ರಸಾಯನಶಾಸ್ತ್ರ ಕಲಿಸುವೆ. ಮುಂದಿನ ವರ್ಷ ನನ್ನ ಸ್ಟಾಫ್ ಹೆಚ್ಚಿಸುವೆ' ಭರವಸೆಯಿಂದ ಈಡಾ ಹೇಳಿದಳು. 'ನಿನ್ನಲ್ಲಿ ಹಣವಿಲ್ಲ, ಕಟ್ಟಡವಿಲ್ಲ, ಕಲಿಸಲು ಸ್ಟಾಫ್ ಕೂಡಾ ಇಲ್ಲ, ಭಾರತದ ಹೆಂಗಸರನ್ನು ದಾದಿಗಳಾಗುವಂತೆ ಪ್ರೇರೇಪಿಸುವುದೂ ಕಷ್ಟ, ಅಂಥದರಲ್ಲಿ ವೈದ್ಯರಾಗಿ ಮಾಡಲು ಹೊರಟಿರುವೆ. ವೈದ್ಯರಾಗಲು ಮುಂದೆ ಬರುವ ಹೆಂಗಸರು ನಿನಗೆ ಸಿಕ್ಕರೂ, ಅವರು ಗಂಡಸರೊಡನೆ ಸ್ಪರ್ಧೆಗೆ ಇಳಿಯಬೇಕು, ಪರೀಕ್ಷೆಗೆ ತೆಗೆದುಕೊಳ್ಳಬೇಕು' ನೂರೆಂಟು ಅಡೆತಡೆಗಳನ್ನು ಕರ್ನಲ್ ಎದುರಿಗಿಟ್ಟ, ಈಡಾ ಎಲ್ಲಕ್ಕೂ ಸಿದ್ಧವಾಗಿದ್ದಳು.

ವೆಲ್ಲೂರಿಗೆ ಹಿಂತಿರುಗಿದವಳೇ ಮಹಿಳೆಯರಿಗಾಗಿ 'ವೆಲ್ಲೂರ್ ವೈದ್ಯ ಶಾಲೆ' ಆರಂಭಿಸಿದಳು. ಹದಿನಾಲ್ಕು ಹುಡುಗಿಯರು ತರಪೇತು ಪಡೆಯಲು ಸಿದ್ಧವಿದ್ದರು. 'ತನ್ನ ಹುಡುಗಿಯರನ್ನು ತಯಾರು ಮಾಡಲು ಸಾಧ್ಯವೆ, ಪುರುಷರೊಡನೆ ಸ್ಪರ್ಧಿಸಿ, ಪರೀಕ್ಷೆಯಲ್ಲಿ ಪಾಸಾಗುವಂತೆ ತಯಾರಿಸಲು ಸಾಧ್ಯವೆ' ಈಡಾ ಬಹಳಷ್ಟು ಚಿಂತಿಸಿದ್ದುಂಟು. ಕಡೆಗೂ ಹುಡುಗಿಯರಿಗೆ ತರಪೇತು ನೀಡಿ, ಅವರೆಲ್ಲರನ್ನು ಕರೆದುಕೊಂಡು ಮದ್ರಾಸಿಗೆ ಹೊರಟಳು. 'ಓಹ್ ನಿನ್ನ ಮೊದಲು ಬ್ಯಾಚಿನ ಹುಡುಗಿಯರನ್ನು ಕರೆತಂದಿದ್ದೀಯ. ಅವರೆಲ್ಲರೂ ನಪಾಸಾದರೆ ಕ್ಷೋಭೆಗೊಳ್ಳಬೇಡ. ತೀರಾ ನಿರೀಕ್ಷೆ ಇಟ್ಟುಕೊಳ್ಳಬೇಡ. ಎಷ್ಟಾದರೂ ಅವರೆಲ್ಲ ಕೇವಲ ಹೆಂಗಸರು' ಕರ್ನಲ್ ಬ್ರೈಸನ್ ಎಚ್ಚರಿಸಿದ. 'ನನ್ನ ವಿದ್ಯಾರ್ಥಿಗಳು ಎಂದರೆ ಏನೆಂದುಕೊಂಡಿದ್ದೀರಿ' ಈಡಾ ಮೇಲೆ ಗುಡುಗಿದರೂ, ಒಳಗೆ ಅವಳ ಎದೆ ಬಡಿದುಕೊಳ್ಳುತ್ತಿತ್ತು. ಹುಡುಗಿಯರು ಪುರುಷರೊಡನೆ ಸ್ಪರ್ಧಿಸಿ ಪರೀಕ್ಷೆ ತೆಗೆದುಕೊಂಡರು. ಮೊದಲು ಪುರುಷರ ಏಳು ಕಾಲೇಜುಗಳ ಫಲಿತಾಂಶ ಹೊರಬಿದ್ದಿತು, ಶೇಕಡಾ 20ರಷ್ಟು ಮಂದಿ ಮಾತ್ರ ಪಾಸಾಗಿದ್ದರು. ಶೇಕಡಾ ಇಪ್ಪತ್ತರಷ್ಟು ಫಲಿತಾಂಶ, ಅಂದರೆ ತನ್ನ ಹದಿನಾಲ್ಕು ಹುಡುಗಿಯರಲ್ಲಿ ಮೂರು ಜನ ಪಾಸಾದಾರು, ಈಡಾ ವಿಪರೀತದ ಆತಂಕದಲ್ಲಿ ಕಾದಳು. ಫಲಿತಾಂಶ ಹೊರಬಿತ್ತು, ಈಡಾ ನಂಬದಾದಳು. ಆಕೆ ತರಪೇತು ನೀಡಿದ ಹದಿನಾಲ್ಕು ಮಂದಿ ಹುಡುಗಿಯರೂ ಪಾಸಾಗಿದ್ದರು! ಕರ್ನಲ್ ಬ್ರೈಸನ್ ಈಡಾಳ ಭುಜದ ಮೇಲೆ ಕೈ ಇಟ್ಟ. 'ನಮ್ಮ ಹುಡುಗರಿಗೆ ನಾಚಿಕೆಯಾಗುವಂತೆ ಮಾಡಿದ್ದೀರಿ' ಹೇಳಿದ. ಅವರೆಷ್ಟಾದರೂ ಕೇವಲ ಪುರುಷರು ತಾನೆ' ಈಡಾ ಕಿಡಿ ಕಾರಿದಳು.

ಸಾಧ್ಯ ಎಲ್ಲವೂ ಸಾಧ್ಯ ಇದು ಡಾ. ಈಡಾಳ ಜೀವನ ಮಂತ್ರವಾಗಿತ್ತು. ಈಡಾಗೀಗ ಎಂಭತ್ತು ವರ್ಷ. ಆಕೆ ಹತ್ತು ಚದುರಡಿಯ ಸಣ್ಣ ಕೋಣೆಯಲ್ಲಿ ಡಿಸ್ಪೆನ್ಸರಿ ತೆರೆದು ಆರಂಭಿಸಿದ್ದಳು. ಇಂದು ವೆಲ್ಲೂರು ಆಸ್ಪತ್ರೆ, ಮಹಿಳೆಯರಂತೆಯೇ ಪುರುಷರಿಗೂ ವೈದ್ಯರಾಗಲು ತೆರೆದ ಕಾಲೇಜಾಗಿತ್ತು. ಇಲ್ಲಿಂದ ಪದವಿ ಪಡೆದ ವಿದ್ಯಾರ್ಥಿಗಳು ಭಾರತದ ಮೂಲೆ ಮೂಲೆಗೆ ಹೋಗಿದ್ದರು. ಅವರೆಲ್ಲರೂ ತಮ್ಮೊಡನೆ ಈಡಾ ಕಲಿಸಿದ ಜ್ಞಾನ ಮತ್ತು ಪ್ರೀತಿಯನ್ನು ಹೊತ್ತೊಯ್ದಿದ್ದರು.

ನಮ್ಮ ನೆಲಕ್ಕೆ ಸಣ್ಣ ಹುಡುಗಿಯಾಗಿ ಆಗಮಿಸಿದ ಈಡಾ, ಭಾರತದ ಮಹಿಳೆಯರ ನೋವಿನ ಸ್ಥಿತಿಗೆ ಕರಗಿದವಳು. ಭಾರತದ ಮಹಿಳೆಯರಿಗಾಗಿಯೇ ವೈದ್ಯಳಾಗಿ ಅಮೆರಿಕಾದ ಸರ್ವ ಸಂಪತ್ತನ್ನೂ ಸುಖದ ಜೀವನವನ್ನು ತೊರೆದು ಹಿಂತಿರುಗಿದವಳು. ಭಾರತದ ಮಹಿಳೆಯರಿಗೆ ವೈದ್ಯರಾಗುವ ತರಪೇತು ಮತ್ತು ಆತ್ಮವಿಶ್ವಾಸವನ್ನು ನೀಡಿದಳು. ಇಷ್ಟೆಲ್ಲ ಅದ್ಭುತ ಸಾಧನೆಗಳ ಮಾನವತಾವಾದಿ ಮಹಿಳೆ, ನಮ್ಮ ಚರಿತ್ರೆಯ ಪುಟಗಳಲ್ಲಿ ಎಲ್ಲೋ ಕಳೆದು ಹೋದಳು. ಈಕೆಯ ಬದುಕನ್ನು ಈಕೆಯಂತೆ ಭಾರತಕ್ಕೆ ಆಗಮಿಸಿ ಸೇವೆ ಸಲ್ಲಿಸಿದ ಅನೇಕ ವಿದೇಶಿ ಮಹಿಳಾ ವೈದ್ಯರ ಜೀವನವನ್ನು ಕೃತಜ್ಞತೆಯಿಂದ ನೆನೆಯಬೇಕಿದೆ. ★

ಮತ್ತೆ ಭಾರತಕ್ಕೆ 'ಸೌಂದರ್ಯ'ದ ಕಿರೀಟ

-ಎನ್ಸಿ

ಮತ್ತೊಂದು ಬಣ್ಣದ ರಾತ್ರಿ, ಲಿಪ್ ಸ್ಟಿಕ್ ತುಟಿಗಳು, ಬಿರಿದೆದೆಗಳು, ಹೊಳೆವ ಫಳ ಫಳ ಡಿಸೈನರ್ ಉಡುಪುಗಳು, ನಡುವೆ ಮದರ್ ತೆರೇಸಾ ! ಹೌದು ಸ್ವಾಮಿ ಮದರ್ ತೆರೇಸಾ ಇಲ್ಲದ ಸೌಂದರ್ಯ ಸ್ಪರ್ಧೆಗಳುಂಟೆ ?

ಮತ್ತೆ ಭಾರತಕ್ಕೆ ಸೌಂದರ್ಯದ ಕಿರೀಟ. ಕಳೆದ ಕೆಲವೇ ವರ್ಷಗಳಲ್ಲಿ ಭಾರತಕ್ಕೆ ಎಷ್ಟು ಬಾರಿ ಭುವನ ಸುಂದರಿ, ವಿಶ್ವ ಸುಂದರಿ ಪಟ್ಟ ಬಂತೆಂದು ಕೇಳಿದರೆ, ಆಗಲೇ ಎಣಿಕೆ ತಪ್ಪುವಂತಾಗಿದೆ. ಸೌಂದರ್ಯದ ಪರಮ ಭಕ್ತರೂ ಒಂದಿಷ್ಟು ಅನುಮಾನದಿಂದ ಹುಬ್ಬೇರಿಸುತ್ತಿದ್ದಾರೆ. ಗೆಲ್ಲುವುದೆಂದರೇನು, ಆರು ವರ್ಷದಲ್ಲಿ ಆರು ಬಾರಿ ಭಾರತ ಜಗತ್ತನ್ನು ಗೆದ್ದದ್ದು ದಿಟವೆ? ತಿಳಿಯದು, ಆದರೆ ಬಿಲಿಯ ಜನರಿರುವ ಭಾರತದಲ್ಲಿ ತಮ್ಮ ಸರಕು ಬಿಕರಿ ಮಾಡಲು ಬಹುರಾಷ್ಟ್ರೀಯ ಕಂಪನಿಗಳ ಸುವ್ಯವಸ್ಥಿತ ಯೋಜನೆ ಗೆದ್ದಿರುವುದಂತೂ ನಿಜ. ಜನಸಾಮಾನ್ಯರ ಮನಸ್ಸಿನಲ್ಲೂ ಮ್ಯಾಚ್ ಫಿಕ್ಸಿಂಗ್‌ಗಿಂತ ಮೊದಲೇ ಬ್ಯೂಟಿಫಿಕ್ಸಿಂಗ್ ಆಗಿರಬಹುದೇ ? ಪ್ರಶ್ನೆ ಮೂಡಿರುವುದು ಸತ್ಯ.

ಈ ಬಾರಿಯ ವಿಶ್ವ ಸುಂದರಿ ಪ್ರಿಯಾಂಕ ಛೋಪ್ರಾ 'ಭಾರತದ ಎರಡು ಬಿಲಿಯನ್ ಜನರು ತಮಗಾಗಿ ಪ್ರಾರ್ಥಿಸುತ್ತಿದ್ದಾರೆ' ಎಂದು ಘೋಷಿಸಿದರು. ಭಾರತದ ಒಂದು ಬಿಲಿಯನ್ ಜನ ಉತ್ತರ ಕೇಳಿ ಸುಸ್ತಾದರೆ, ಎರಡು ಬಿಲಿಯನ್ ಮಾರುಕಟ್ಟೆಯನ್ನು ಊಹಿಸಿಯೇ ಪ್ರಾಯೋಜಕ ಕಂಪನಿಗಳು ಖುಷಿಯಿಂದ ಉಬ್ಬಿರಬೇಕು.

ಪ್ರತಿ ಬಾರಿಯಂತೆ ಈ ಬಾರಿಯೂ ಸುಂದರಿಯರು ತಮ್ಮ ದೇಹವನ್ನು ತಿದ್ದಿ ತೀಡಿ ರಿಪೇರಿ ಮಾಡಿಸಿಕೊಂಡು, ಇದು ಬುದ್ಧಿಮತ್ತೆ, ಚುರುಕುತನ, ಸಾಮಾನ್ಯ ಜ್ಞಾನ ಎಲ್ಲವೂ ಒಡಗೂಡಿದ ಪರಿಪೂರ್ಣ ವ್ಯಕ್ತಿತ್ವದ ಸ್ಪರ್ಧೆಯೆಂದು ಸಾರಿದರು. ಇಲ್ಲಿಯ ತೀರ್ಪುಗಾರರು ಕೇಳುವ ಪ್ರಶ್ನೆಗಳಲ್ಲಿ ಅವರ ಬುದ್ಧಿಮತ್ತೆಯ ಬಗ್ಗೆಯೇ ಅನುಮಾನ ಹುಟ್ಟುವಾಗ ಉತ್ತರಿಸಿದವರ ಬುದ್ಧಿಮತ್ತೆಯನ್ನು ಯಾವ ಮಾಪನದಿಂದ ಅಳೆದರೋ ದೇವರೇ ಬಲ್ಲ. ಅಂದಹಾಗೆ ಈ ಬಾರಿ ಕಿರೀಟ ತಂದುಕೊಟ್ಟ ಉತ್ತರ ಏನು ಗೊತ್ತೆ ? ಈಗ ಜೀವಂತವಿರುವ ಯಾವ ಮಹಿಳೆಯನ್ನು ನೀವು ಮೆಚ್ಚುತ್ತೀರಿ ? ಎಂದು ಕೇಳಿದಾಗ 'ಮದರ್ ತೆರೇಸಾ' ಆಕೆಯನ್ನು ನಾನು ನನ್ನ ಹೃದಯದಾಳದಿಂದ ಮೆಚ್ಚುತ್ತೇನೆ ಎಂದು ಗಟ್ಟಿ ಹೊಡೆದ ಒಂದು ಪುಟ್ಟ ಭಾಷಣವನ್ನೇ ಪ್ರಿಯಾಂಕ ಮಂಡಿಸಿದರು. ಬುದ್ಧಿಮತ್ತೆ , ಸಾಮಾನ್ಯ ಜ್ಞಾನ ಎಲ್ಲವನ್ನೂ ಪ್ರಖರವಾಗಿ ಬೆಳಗಿದ ಇವರ ಉತ್ತರಕ್ಕೆ ಬೆರಗಾಗಿಯೇ ತೀರ್ಪುಗಾರರು ಕಿರೀಟ ತೊಡಸಿದರು.

ಸೌಂದರ್ಯ ಇರುವುದು ನೋಡುವವರ ಕಣ್ಣಲ್ಲಿ ಸ್ವಾಮಿ, ಉತ್ತರ ಕೇಳುವವರ ಕಿವಿಯಲ್ಲಲ್ಲ, ಮಿದುಳಿನಲ್ಲಂತೂ ಖಂಡಿತಾ ಅಲ್ಲ.

ಅಂದಹಾಗೆ ಮದರ್ ತೆರೇಸಾಗೂ ಸೌಂದರ್ಯ ರಾಣಿಯರಿಗೂ ಬಹಳ ನಿಕಟ ಸಂಬಂಧವಿದೆ. ಈ ಸಂಬಂಧ ಆರು ವರ್ಷದ ಹಿಂದೆ ಸುಷ್ಮಿತಾ ಸೇನ್ ಮದರ್ ತೆರೇಸಾ ತಮ್ಮ ಆದರ್ಶ, ತಾವು ಭಾರತಕ್ಕೆ ಹಿಂತಿರುಗಿದೊಡನೆ ಅವರನ್ನು ಭೇಟಿಯಾಗುತ್ತೇನೆ. ಎಂದು ಹೇಳಿದಾಗಿನಿಂದ ಆರಂಭವಾಯಿತು. ಅದಕ್ಕೂ ಮೊದಲು 1992ರಲ್ಲಿ ಉತ್ತಮ ಆಟಗಾರ್ತಿ, ಮಧು ಸಪ್ರೆ ಸೌಂದರ್ಯ ಸ್ಪರ್ಧೆಯ ಕೊನೆಯಂಕವನ್ನು ತಲುಪಿದ್ದರು. ಕಿರೀಟ ಅವರಿಗೇ ದಕ್ಕುವಂತೆ ಕಂಡಿತ್ತು. ಕೊನೆಯ ಪ್ರಶ್ನೆ : 'ನೀವು ಒಂದು ದಿನದ ಮಟ್ಟಿಗೆ ಭಾರತದ ಪ್ರಧಾನಿಯಾದರೆ ಏನು ಮಾಡುವಿರಿ ? ಎಂದು ಕೇಳಿದರು. ಕ್ರಿಕೆಟ್ ಒಂದು ಬಿಟ್ಟರೆ, ಕ್ರೀಡೆಗಳಿಗೆ ಏನೇನೂ ಸೌಕರ್ಯವಿಲ್ಲದ ಭಾರತದ ಪರಿಸ್ಥಿತಿಯಿಂದ ಬೇಸತ್ತ ಮಧು, ಪ್ರಾಮಾಣಿಕವಾಗಿ ತಮಗನಿಸಿದ್ದನ್ನು ಹೇಳಿ ಬಿಟ್ಟರು' ಒಳ್ಳೆಯ ಸ್ಪೋರ್ಟ್ಸ್ ಕಾಂಪ್ಲೆಕ್ಸ್ ಕಟ್ಟಿಸುವವರಿಗೆ ಕಿರೀಟ ಕೊಡುವವರಾರು ? ಅಲ್ಲಿಂದ ಮುಂದೆ ಭಾರತದ ಸುಂದರಿಯರು ಮಧು ಸಪ್ರೆಯ ತಪ್ಪನ್ನು ಮಾಡಲಿಲ್ಲ. ಸುಷ್ಮಿತಾ ಸೇನ್‌ನಿಂದ ಆರಂಭವಾಗಿ, ಇಂದು ಪ್ರಿಯಾಂಕರವರೆಗೆ - ಪ್ರಶ್ನೆ ಯಾವುದಾದರೂ ಇರಲಿ, ಉತ್ತರದಲ್ಲಿ ಮಾತ್ರ ಮದರ್ ತೆರೇಸಾ ತಪ್ಪದೆ ಇರುವರು.

'ಅಲ್ಲ ನೀವು ಹೇಳಿದ ಉತ್ತರ ತಪ್ಪಿತ್ತಲ್ಲ, ಎಂದು ಪತ್ರಕರ್ತರೊಬ್ಬರು ಕೇಳಿದಾಗ ಪ್ರಿಯಾಂಕ ಉತ್ತರಿಸಿದರು - ಉತ್ತರ ತಪ್ಪಾದರೇನು, ತಾವೆಷ್ಟು ಆತ್ಮವಿಶ್ವಾಸದಿಂದ ಹೇಳಿದೆ. ಅದು ಮುಖ್ಯ, ಅದೇ ತೀರ್ಪುಗಾರರನ್ನು ಗೆದ್ದಿತ್ತು, ಅದೇನೋ ನಿಜ, ತಪ್ಪು ಉತ್ತರ ಹೇಳಿದರೆಂದು ನಪಾಸು ಮಾಡಲು ಇದೇನು ಐ.ಎ.ಎಸ್ ಪರೀಕ್ಷೆಯಲ್ಲ. ತಪ್ಪು ಉತ್ತರ ಹೇಳಿದರೆಂದು ಖಾಲಿ ಕೈಯಲ್ಲಿ ಮನೆಗೆ ಕಳುಹಿಸಲು ಕೌನ್ ಬನೇಗ ಕರೋಡ್‌ಪತಿ ಕೂಡಾ ಅಲ್ಲ. ಇದು ಬುದ್ಧಿಮತ್ತೆ, ಚುರುಕು ಸಾಮಾನ್ಯ ಜ್ಞಾನದ ಪರೀಕ್ಷೆ. ಇಲ್ಲಿ ತಪ್ಪು ಉತ್ತರಕ್ಕೆ ಕಿರೀಟವುಂಟು, ಏನೇ ಇರಲಿ, ಮತ್ತೊಮ್ಮೆ ನೀವು ಕೆಲಸದ ಸಂದರ್ಶನಕ್ಕೋ, ಕಾಲೇಜಿನ ಸೀಟಿಗೋ ಕರೆದಾಗ, ಪ್ರಶ್ನೆಗೆ ಉತ್ತರ ಗೊತ್ತಿಲ್ಲದಿದ್ದರೆ ನಡುಗಬೇಡಿ, ಬೆವರಬೇಡಿ, ಅತ್ಯಂತ ಆತ್ಮವಿಶ್ವಾಸದಿಂದ

ತಪ್ಪನ್ನೇ ಸರಿ ಎನಿಸುವಷ್ಟು ಗಟ್ಟಿಯಾಗಿ ಉತ್ತರಿಸಿ, ಯಾರಿಗೆ ಗೊತ್ತು, ನಿಮ್ಮ ಅದೃಷ್ಟವೂ ಖುಲಾಯಿಸ ಬಹುದು. ಉತ್ತರ ಮುಖ್ಯವಲ್ಲ ಆತ್ಮವಿಶ್ವಾಸ ಮುಖ್ಯ !

ನಲವತ್ತು ವರ್ಷಗಳ ಹಿಂದೆ ಪಾಶ್ಚಿಮಾತ್ಯರು ಅತ್ತ ಬಿಸುಟ ಸೌಂದರ್ಯ ಸ್ಪರ್ಧೆಗಳು ನಮಗಿಂದು ಪರಮ ಉದ್ದೇಶವಾಗಿವೆ. ಈ ಸೌಂದರ್ಯ ರಾಣಿಯರು ನಮ್ಮ ಪ್ರತಿಷ್ಠಿತ ದಿನಪತ್ರಿಕೆಗಳ ಮೊದಲ ಪುಟದಲ್ಲಿ ಇಷ್ಟಗಲ ರಾರಾಜಿಸುತ್ತಾರೆ. ಭಾರತದ ರಾಷ್ಟ್ರಪತಿಗಳು, ಪ್ರಧಾನಿಗಳು ಇವರನ್ನು ಜಗತ್ತು ಗೆದ್ದು ಬಂದರೆಂದು ಸಂಭ್ರಮದಿಂದ ಸ್ವಾಗತಿಸುತ್ತಾರೆ. ವಿಪರ್ಯಾಸವೆಂದರೆ ಮಿಸ್ ವರ್ಲ್ಡ್ ಪೇಜೆಂಟ್ ನ ಮಾಲಕಿ ಜೂಲಿಯ ಮಾರ್ಲೆ ಇದೆಲ್ಲ ಬರೀ ಫನ್‌ಗಾಗಿ ಮಾಡುವುದು, ಇದನ್ನು ಗಂಭೀರವಾಗಿ ಪರಿಗಣಿಸಬೇಕಿಲ್ಲ, ಎನ್ನುತ್ತಾರೆ. ಆದರೆ ಭಾರತಕ್ಕೆ ಬ್ಯೂಟಿ ಬಲು ಗಂಭೀರ ವಿಷಯವಾಗಿದೆ. ಎಳೆಯ ಹುಡುಗಿಯರ ಬದುಕಿನ ಪರಮೋದ್ದೇಶವಾಗಿದೆ. ಎಷ್ಟಾದರೂ ಪ್ರಿಯಾಂಕ ಹತ್ತು ವರ್ಷಕ್ಕೇ ತಾವು ಸೌಂದರ್ಯ ರಾಣಿಯಾಗಲು ನಿರ್ಧರಿಸಿದ್ದರಂತಲ್ಲ. ಆಗಿನಿಂದಲೇ ತಯಾರಿ ಆರಂಭಿಸಿದ್ದರಂತೆ ! ಒಂದು ವರ್ಷದ ಹಿಂದೆ ಓದು ಬಿಟ್ಟು, ಸಂಪೂರ್ಣ ಸ್ಪರ್ಧೆಯ ತಯಾರಿಯಲ್ಲಿ ತೊಡಗಿದರು. ತಾನು ರಾಜಕುಮಾರಿಯಾಗಲೇಬೇಕು, ರಾಜಕುಮಾರ ವಿಲಿಯಂನನ್ನು ಮದುವೆಯಾಗಿಯಾದರೂ ಸರಿ, ಇಲ್ಲ ಸೌಂದರ್ಯ ಕಿರೀಟ ತೊಟ್ಟಾದರೂ, ಎಂಬ ಛಲದಿಂದ ಹೊರಟ ಪ್ರಿಯಾಂಕ ಇದೀಗ ಭಾರತದ ಹರೆಯದ ಹುಡುಗಿಯರಿಗೆ ಸಿಂಡ್ರೆಲ್ಲಾ ಕನಸುಗಳನ್ನು ಹಂಚಿದ್ದಾರೆ.

ಅಂದಹಾಗೆ ಈಗಷ್ಟೇ ದೂರದರ್ಶನದಲ್ಲಿ ಹೈದರಾಬಾದಿನ ಪುಟ್ಟ ಹುಡುಗಿ 'ಹುಡುಗಿ ಏಷಿಯಾ ಪ್ಯಾಸಿಫಿಕ್' ಕಿರೀಟ ಗೆದ್ದು ಬಂದದ್ದನ್ನು ತೋರಿಸಿದರು. ಆಕೆಯ ಶಾಲೆಯಲ್ಲಿ ಭರ್ಜರಿ ಸ್ವಾಗತ ಸಮಾರಂಭ. 'ಆಕೆಗೆ ಏನಾದರೂ ಬೈಯ್ಯಬೇಕು ಎಂದು ಹೊರಟಾಗಲೂ, ಆಕೆ ಎಷ್ಟು ಚೆನ್ನಾಗಿ ನಗುತ್ತಾಳೆ ಎಂದು ಸುಮ್ಮನಾಗುತ್ತಿದೆ' ಎಂದು ಹುಡುಗಿಯ ಕ್ಲಾಸ್ ಟೀಚರ್ ಹಾಡಿ ಹೊಗಳಿದರು. 'ಒಂದೆರಡು ಸಿನಿಮಾ ಆಫರ್ ಬಂದಿರುವುದಾಗಿ' ಹುಡುಗಿ ಖುಷಿಯಿಂದ ಹೇಳಿದಳು. ಆಕೆಯ ಕಿರೀಟ, ಶಾಲೆಯಲ್ಲಿ ಏರ್ಪಡಿಸಿದ ಸಂಭ್ರಮದ ಸಮಾರಂಭ, ಆ ಹುಡುಗಿಯ ದೊಡ್ಡ ಚಿತ್ರ ಎಲ್ಲವನ್ನೂ ಬೆರಗಿನಿಂದ ನೋಡಿದ ಶಾಲೆಯ ಹುಡುಗಿಯರು 'ಆಕೆ ನಮಗೆ ಸ್ಫೂರ್ತಿ ನೀಡಿದ್ದಾಳೆ, ಆಕೆ ನಮ್ಮ ಆದರ್ಶ' ಎಂದು ಹೊಳೆವ ನಕ್ಷತ್ರ ಕಣ್ಣುಗಳಲ್ಲಿ ಘೋಷಿಸಿದರು!

> ಇತ್ತೀಚೆಗೆ ಥೈಲಾಂಡ್‌ನಲ್ಲಿ ಒಂದು ಸೌಂದರ್ಯ ಸ್ಪರ್ಧೆಯನ್ನು ರದ್ದುಗೊಳಿಸಿದರು. ಕಾರಣ, ಕಿರೀಟ ಗೆದ್ದ ಸುಂದರಿ, ದಿಟದಲ್ಲಿ 'ಗಂಡಸಾ'ಗಿದ್ದನಂತೆ! 'ಸದ್ಯ ನಮಗೆ ಆ ಭಯ ಇಲ್ಲ, ಗೆಲುವಿನ ಆ ರಾತ್ರಿ ನಮ್ಮ ಪ್ರಿಯಾಂಕ ತೊಟ್ಟ ಬಿರಿದೆದೆಯ ಡೆಸೈನರ್ ಉಡುಪನ್ನು ಕಂಡರೆ ಯಾರೂ ಆ ಕಾರಣಕ್ಕೆ ರದ್ದು ಮಾಡಲಾರರು' ಎನ್ನುತ್ತಾರೆ ಪ್ರಸಿದ್ಧ ದಿನಪತ್ರಿಕೆಯ ಅಂಕಣಕಾರ!

ನಮ್ಮ ಭಾರತಕ್ಕೆ ಮತ್ತೊಬ್ಬ ಕಿರಣ್ ಬೇಡಿ, ಬಚೇಂದ್ರಿ ಪಾಲ್, ಅರುಣಾ ರಾಯ್, ನಿವೇದಿತಾ ಬಾಸಿನ್ ದಕ್ಕುತ್ತಾರೋ ಇಲ್ಲವೋ ತಿಳಿಯದು, ಆದರೆ ಚಿಂತೆ ಬೇಡಿ ಇನ್ನು ಮುಂದೆ ನಿಮ್ಮ ಊರು, ಬೀದಿ, ಗಲ್ಲಿ ಗಲ್ಲಿಗಳಲ್ಲೂ ಸುಂದರಿಯರು ನಿಮಗೆ ಎಡವಿ ಬಿದ್ದೆಡೆ ಎದುರಾಗುತ್ತಾರೆ, ನೂರು ಸಾವಿರ ಸಂಖ್ಯೆಯಲಿ. 'ಬ್ಯೂಟಿಫಿಕೇಷನ್ ಆಫ್ ಭಾರತ' ಎಂದರೆ ಇದೇ ಇರಬೇಕು ! ★

ಪ್ರೀತಿಯ ಮಗಳಿಗೆ

ದೂರದೂರಿನಲ್ಲಿರುವ
ನಿನಗೆ ಕಳಿಸಲು ಹಾಸಿಗೆಯನ್ನು
ಚೀಲದೊಳಗಿಟ್ಟು ಹೊಲೆಯುತ್ತಿದ್ದೇನೆ
ನಿನ್ನ, ನಿನ್ನ ಮಕ್ಕಳ
ರಾತ್ರಿ ನಿದ್ರೆಗೆ ಸುಖ ತರಲು
ಚೆಂದದ ಕನಸುಗಳಿಗೆ ನೆಲವಾಗಲು
ಬೆಳಗಿನ ಚೈತನ್ಯಕ್ಕೆ ಅನುವಾಗಲು
ಸುಖದ ಸಂಭ್ರಮಕ್ಕೆ ತವರಾಗಲು
ಪ್ರತಿ ಹೊಲಿಗೆಯಲ್ಲೂ ಪ್ರೀತಿ ತುಂಬುತ್ತಿದ್ದೇನೆ
ಆದರೆ ಮಗಳೇ
ಹಾಸಿಗೆ ದಕ್ಕಲು ಹೊಲಿಗೆ ಕತ್ತರಿಸಲೇಬೇಕು
ತಾಯಿ ಮಗಳ ಸಂಬಂಧವೇ ಹಾಗೆ
ಪ್ರೀತಿಯೊಡನೆ ಕತ್ತರಿಯಾಡುತ್ತಿರುವುದೇ
ಅದರ ಜಾಯಮಾನ
ಸಿಗದ ತೃಪ್ತಿಗಳು, ನಿಲುಕದ ನಿರೀಕ್ಷೆಗಳು
ಮತ್ತೇನನ್ನೋ ಹುಡುಕುವುದಕ್ಕಾಗಿ
ಕತ್ತರಿಗಳಾಗಿ ಸಿಕ್ಕ ಪ್ರೀತಿಯ ಹೊಲಿಗೆಗಳನ್ನು
ನಿಷ್ಕರುಣವಾಗಿ ಕತ್ತರಿಸಿಯೇ ಬಿಡುತ್ತದಲ್ಲ ?
ಪ್ರೀತಿ ಎನ್ನುವುದೇ ಹೊಲಿಗೆ ಗೆಳತಿ
ಮಗಳ ಭಾವನೆಗಳೊಂದಿಗೆ
ಎಂದೆಂದಿಗೂ ಹರಿಯದಂಥ
ದಾರ ಪೋಣಿಸುವವಳೇ
ನಿಜವಾದ ತಾಯಿ.

– ಶಾಂತಾನಾಗರಾಜ್

ನ್ಯಾಯ ಎತ್ತಿ ಹಿಡಿದ ಸರ್ವೋಚ್ಛ ನ್ಯಾಯಾಲಯ

-ಹೇಮಲತಾ ಮಹಿಷಿ

ಇತ್ತೀಚಿನ ದಿನಗಳಲ್ಲಿ ನಮ್ಮ ದೇಶದಲ್ಲಿ ಮಕ್ಕಳ ಮೇಲೆ ಆಗುತ್ತಿರುವ ಅಮಾನುಷವಾದ ಅತ್ಯಾಚಾರದ ಪ್ರಕರಣಗಳನ್ನು ಗಮನಿಸಿದಾಗ ನಮ್ಮ ಜನರ ಮನುಷ್ಯತ್ವದ ಮೇಲಿನ ನಂಬಿಕೆಯೇ ಹೊರಟು ಹೋಗುತ್ತದೆ. ಸಂಸ್ಕೃತಿ, ನಾಗರೀಕತೆ ಅರ್ಥಹೀನವೆನಿಸುತ್ತದೆ. ಪುರುಷರ ಈ ವಿಕೃತ ಲೈಂಗಿಕ ತೃಷೆಗೆ ಮುಗ್ಧ ಮಕ್ಕಳು ಬಲಿಪಶುಗಳಾಗುತ್ತಿರುವುದು ನಮ್ಮ ಸಮಾಜ ಎಷ್ಟು ಆರೋಗ್ಯಕರವಾಗಿದೆ ಎಂಬುದರ ಬಗ್ಗೆ ಅನುಮಾನ ಹುಟ್ಟಿಸುತ್ತದೆ. 1 ವರ್ಷದ ಹಸುಳೆ ಹೆಣ್ಣುಮಗು ಎಂತಹ ಲೈಂಗಿಕ ಪ್ರಚೋದನೆಯನ್ನು ಕೊಡಬಲ್ಲದು? ಹೆಣ್ಣು ಮಕ್ಕಳು ತಮ್ಮ ಉಡುಪು, ಹಾವ-ಭಾವ ನಡತೆಗಳಿಂದ ಪುರುಷರನ್ನು ಆಕರ್ಷಿಸಿ, ಇಂತಹ ಕೃತ್ಯಕ್ಕೆ ತಾವೇ ಪ್ರಚೋದನೆ ನೀಡಿ, ಕಾರಣ ಕರ್ತೃಗಳಾಗುತ್ತಾರೆ ಎಂದು ಟೀಕಿಸುವವರು ಹೆಣ್ಣು ಶಿಶುಗಳ ಮೇಲಿನ ಅತ್ಯಾಚಾರದ ಪ್ರಕರಣಕ್ಕೆ ಏನು ಸಮರ್ಥನೆ ನೀಡುತ್ತಾರೆ? ಇಂತಹ ಹೀನಕೃತ್ಯಗಳು ಕೇವಲ ಮಾನಸಿಕ ಪರಿಣಾಮವಲ್ಲದೇ ಅಂತಹ ಪುಟ್ಟ ಮುಗ್ಧ ಹೆಣ್ಣುಮಕ್ಕಳ ಮರಣಕ್ಕೂ ಕಾರಣವಾಗುತ್ತಿವೆ. ಹೆಚ್ಚಿನ ಪ್ರಕರಣಗಳಲ್ಲಿ ತಂದೆ ತಾಯಿಗಳು ಪೋಲೀಸರಿಗೆ ದೂರು ನೀಡಿ ನ್ಯಾಯಾಲಯಗಳಲ್ಲಿ ವಿಚಾರಣೆ ನಡೆದು ಅಪರಾಧಿಗಳಿಗೆ ಶಿಕ್ಷೆಯಾಗುತ್ತಿದೆ. ಬಹುಶಃ ಮಕ್ಕಳು ಇಂತಹ ಹೀನಕೃತ್ಯಕ್ಕೆ ಬಲಿಯಾಗುತ್ತಿರುವುದರಿಂದ ಪೋಲೀಸರು, ವೈದ್ಯರು ಕನಿಕರಿಸಿ ತಮ್ಮ ತಮ್ಮ ಕರ್ತವ್ಯಗಳನ್ನು ಸರಿಯಾಗಿ ನಿರ್ವಹಿಸುತ್ತಿರುವುದರಿಂದ ತಂದೆ-ತಾಯಿಗಳೂ ಶೀಘ್ರವಾಗಿ ದೂರು ನೀಡಿ ಸಹಕರಿಸುತ್ತಿರುವುದರಿಂದ ನ್ಯಾಯಾಲಯಗಳಲ್ಲಿ ಸರಿಯಾಗಿ ವಿಚಾರಣೆ ನಡೆದು ಅಪರಾಧಗಳು ಸಾಬೀತಾಗುತ್ತಿವೆ. ಅದೇ ಮಹಿಳೆಯ ಮೇಲೆ ಅತ್ಯಾಚಾರ ನಡೆದಾಗ ಅನೇಕ ಶಕ್ತಿಗಳ ಕೈವಾಡದಿಂದಾಗಿ ತನಿಖೆ ಸರಿಯಾಗಿ ನಡೆಯದೇ ಅಪರಾಧಿಗಳು (ಅನೇಕ ವೇಳೆ ಪ್ರಭಾವಶಾಲಿ ವ್ಯಕ್ತಿಗಳು) ಬಿಡುಗಡೆ ಹೊಂದುತ್ತಾರೆ. ದೂರು ನೀಡಿದ ಮಹಿಳೆಯೇ ಅವಮಾನಿತಳಾಗುತ್ತಾಳೆ.

ಇದೇ ವರ್ಷದ ನವೆಂಬರ್ ತಿಂಗಳನಲ್ಲಿ ನಮ್ಮ ಸರ್ವೋಚ್ಚ ನ್ಯಾಯಾಲಯವು ಇಂತಹ ಹಸುಳೆಯ ಮೇಲಿನ ಪ್ರಕರಣ ವೊಂದರಲ್ಲಿ ಇಬ್ಬರು ಅಪರಾಧಿಗಳಿಗೆ ಜೀವಾವಧಿ ಶಿಕ್ಷೆ ವಿಧಿಸಿದೆ. ಪ್ರಕರಣದ ವಿವರಗಳು ಎಂತಹವರಿಗೂ ಮೈಝುಮ್ಮೆನಿಸುವಂತೆ ಮಾಡುತ್ತವೆ. ಅಪರಾಧಿ ಬಗ್ಗೆ ಜಿಗುಪ್ಸೆ, ಅಸಹ್ಯ ಉಂಟುಮಾಡುತ್ತದೆ.

ನಾಲ್ಕು ವರ್ಷದ ಎಳೆಯ ಅನುರಾಧ ಒಂದು ಮಧ್ಯಾಹ್ನ ಮನೆಯಲ್ಲಿ ಆಟವಾಡುತ್ತಿದ್ದಾಗ ತಾಯಿಯ ಪರಿಚಯದ ಸುನೀಲ್ ಅವಳನ್ನು ಹತ್ತಿರದ ತನ್ನ ಮನೆಗೆ ಕರೆದೊಯ್ದ. ಮುಂದೆ ಉಸಿರಾಟ ನಿಂತ ಅನುರಾಧಾಳ ನಗ್ನ ಎಳೆದೇಹ ಅವನ ಮನೆಯಲ್ಲಿ ಸಿಕ್ಕಿತು ಆಗ ಅಲ್ಲಿದ್ದ ಸುನೀಲ್ ಮತ್ತು ರಮೇಶ್‌ರವರನ್ನು ಪೋಲೀಸರು ಸೆರೆಹಿಡಿದರು. ಮೃತದೇಹದ ಪರೀಕ್ಷೆ ನಡೆಸಿದ ವೈದ್ಯರು ಪರೀಕ್ಷೆ ನಡೆಸಿ ಅನುರಾಧಾಳ ಎಳೆಯ ದೇಹದ ಮೇಲೆ ನಡೆದ ಲೈಂಗಿಕದಾಳಿಗಳ ಬಗ್ಗೆ ಅದರಿಂದಾದ ಗಾಯಗಳ ಬಗ್ಗೆ ವಿವರವಾದ ವರದಿ ನೀಡಿದರು. ಆ ಒಳ ಗಾಯಗಳಿಂದಾಗಿಯೇ ಮಗು ಮೃತಪಟ್ಟಿರುವುದು ಸಾಬೀತಾಗಿ ಸೆಷನ್ಸ್ ನ್ಯಾಯಾಲವು ಅಪರಾಧಿಗಳಿಗೆ ಜೀವಾವಧಿ ಶಿಕ್ಷೆ ವಿಧಿಸಿತು.

ಅಪೀಲಿನಲ್ಲಿ ಉಚ್ಚ ನ್ಯಾಯಾಲಯವು ಸಾಕ್ಷಿ ಹೇಳಿಕೆಯಲ್ಲಿರುವ ಕೆಲವೊಂದು ವ್ಯತ್ಯಾಸಗಳನ್ನು ಆಧರಿಸಿ ಪೋಲೀಸ್ ಮಹಜರಿಗೆ ಸ್ವತಂತ್ರ ಸಾಕ್ಷಿ ಸಹಿ ಮಾಡಿಲ್ಲವೆಂಬ ಕಾರಣದ ಮೇಲೆ ಅವರಿಬ್ಬರನ್ನೂ ಬಿಡುಗಡೆ ಮಾಡಿತು. ಸರ್ವೋಚ್ಚನ್ಯಾಯಾಲಯದ ಮುಂದೆ ಉಚ್ಚನ್ಯಾಯಾಲಯದ ತೀರ್ಪನ್ನು ಪ್ರಶ್ನಿಸಲಾಯಿತು. ಸರ್ವೋಚ್ಚ ನ್ಯಾಯಾಲಯವು ಉಚ್ಚ ನ್ಯಾಯಾಲಯ ಎತ್ತಿದ ಎಲ್ಲಾ ಸಂದೇಹಗಳನ್ನು ತಳ್ಳಿಹಾಕಿ ಸೆಷನ್ಸ್ ನ್ಯಾಯಾಲಯದ ತೀರ್ಪನ್ನು ಎತ್ತಿ ಹಿಡಿಯಿತು.

"ಬ್ರಿಟಿಷರ ಕಾಲದಲ್ಲಿ ಪೋಲೀಸರ ಕಾರ್ಯದ ಬಗ್ಗೆ ಅನುಮಾನದಿಂದ ನೋಡುವ ಪ್ರವೃತ್ತಿ ಇತ್ತು. ಪೋಲೀಸರಿಗೂ ಅದು ತಿಳಿದಿತ್ತು. ಆದರೆ ಸ್ವಾತಂತ್ರ್ಯನಂತರದ ವರ್ಷಗಳಲ್ಲಿ ಈ ಪ್ರವೃತ್ತಿ ಬದಲಾಗಬೇಕಿದೆ. ಪೋಲೀಸರು ತೆಗೆದುಕೊಳ್ಳುವ ಕ್ರಮಗಳನ್ನು ಅವರ ದಾಖಲೆಗಳನ್ನು ಆರಂಭದಿಂದಲೇ ಅನುಮಾನದಿಂದ ನೋಡುವುದು ಬದಲಾಗಬೇಕಿದೆ. ಅವುಗಳು ಸುಳ್ಳಾಗಿದ್ದಲ್ಲಿ ಅದನ್ನು ಪ್ರಶ್ನಿಸಿ ಸುಳ್ಳೆಂದು ಸಾಬೀತು ಪಡಿಸಲು ಆರೋಪಿಗಳಿಗ ಅವಕಾಶವಿರುತ್ತದೆ" ಎಂದು ಸರ್ವೋಚ್ಚ ನ್ಯಾಯಾಲಯ ಹೇಳಿರುವುದು ಬಹುಮುಖ್ಯ ಅಂಶವಾಗಿದೆ. ಇದರಿಂದ ಅನೇಕ ಮೊಕದ್ದಮೆಗಳಲ್ಲಿ ಆರೋಪಿಗಳಿಗೆ ಶಿಕ್ಷೆಯಾಗುತ್ತದೆ ಎನ್ನುವುದು ನಿಜ. ಆದರೆ ಪೋಲೀಸರು ಇದನ್ನು ದುರುಪಯೋಗ ಪಡಿಸಿಕೊಳ್ಳುವ ಭಯವೂ ಜೊತೆಗೇ ಇರುತ್ತದೆ.

ಇಬ್ಬರು ಸಾಕ್ಷಿಗಳ ಹೇಳಿಕೆಗಳಲ್ಲಿರುವ ಕೆಲವೊಂದು ವ್ಯತ್ಯಾಸಗಳನ್ನು ಸರ್ವೋಚ್ಚ ನ್ಯಾಯಾಲಯ ಕಡೆಗಣಿಸಿ, "ಯಾವುದೇ ಮೊಕದ್ದಮೆಯಲ್ಲಿ ಇಬ್ಬರು ಸಾಕ್ಷಿಗಳ ಹೇಳಿಕೆಗಳಲ್ಲಿ ಅಂತ ವ್ಯತ್ಯಾಸಗಳು ಸಹಜವಾಗಿ ಕಂಡು ಬರುತ್ತದೆ. ಆ ವ್ಯತ್ಯಾಸಗಳೇನು ಮುಖ್ಯವಿಷಯಕ್ಕೆ ಸಂಬಂಧಿಸಿಲ್ಲ" ಎಂದು ಹೇಳಿ, ಮೊದಲನೆಯ ವೈದ್ಯರು ಕೇವಲ ಮಗುವಿನ ದೇಹದ ಮೇಲಿನ ತರಚುಗಾಯದ ಬಗ್ಗೆ ಕೊಟ್ಟ ಪ್ರಮಾಣ ಪತ್ರವನ್ನು ನಂಬದೇ ವಿವರವಾಗಿ ದೇಹದ ಪರೀಕ್ಷೆ ಮಾಡಿದ ಎರಡನೆಯ ವೈದ್ಯರು ಕೊಟ್ಟ ಸವಿಸ್ತಾರವಾದ ವರದಿಯನ್ನು ನಂಬಿಕೆಗೆ ಅರ್ಹವೆಂದು ಸ್ವೀಕರಿಸಿದೆ. "ವೈದ್ಯರು ವಿವರಿಸಿರುವ

ಅಮಾನುಷವಾದ ಲಕ್ಷಣಗಳನ್ನು ಗಮನಿಸಿದಾಗ ಮಗುವಿನ ಮೇಲೆ ಹಿಂಸಾತ್ಮಕ ಲೈಂಗಿಕ ಹಲ್ಲೆ, ಅತ್ಯಾಚಾರ, ಪುರುಷ ಮೈಥುನ ಮಗುವಿನ ಬಾಯಲ್ಲಿ ಶಿಶ್ನ ಪ್ರವೇಶ ನಡೆದಿದೆ ಎನ್ನುವುದು ಕಂಡು ಬರುತ್ತದೆ. ನಜ್ಜು-ಗುಜ್ಜಾದ ಎಳೆಯ ದೇಹವನ್ನು ನೋಡಿದಾಗ ಒಂದಕ್ಕಿಂತ ಹೆಚ್ಚಿನ ಅತ್ಯಾಚಾರಿಗಳು ದೇಹದ ಮೇಲೆ ಲೈಂಗಿಕ ಧಾಳಿ ನಡೆಸಿರುವುದರ ಸಾಧ್ಯತೆ ಕಂಡು ಬರುತ್ತದೆ'' ಎಂದು ನಿರ್ಣಯ ನೀಡಿದೆ. ''ತಾವು ನಡೆಸಿದ ಈ ಕೃತ್ಯದಿಂದ ಎಳೆಯ ಮಗು ಸಾವನ್ನಪ್ಪುತ್ತದೆ ಎನ್ನುವುದು ತಮಗೆ ಗೊತ್ತಿರಲಿಲ್ಲ ಎಂದು ಆರೋಪಿಗಳು ಹೇಳಲು ಸಾಧ್ಯವಿಲ್ಲ'' ಎಂದು ಹೇಳಿ ಸರ್ವೋಚ್ಚ ನ್ಯಾಯಾಲಯವು ಇಬ್ಬರು ಅಪರಾಧಿಗಳಿಗೆ ಜೀವಾವಧಿ ಶಿಕ್ಷೆಯನ್ನು ಎತ್ತಿ ಹಿಡಿದಿದೆ. ನ್ಯಾಯಾಲಯಗಳು ಇಂತಹ ಕಠಿಣ ಶಿಕ್ಷೆ ಕೊಡದಿದ್ದಲ್ಲಿ ನಮ್ಮ ಸಮಾಜದಲ್ಲಿ ಸಣ್ಣವಯಸ್ಸಿನ ಹೆಣ್ಣು ಮಕ್ಕಳೂ ರಕ್ಷಣೆ ಇಲ್ಲದೇ ಇರುವ ಭಯಾನಕ ಪರಿಸ್ಥಿತಿ ಉಂಟಾಗುತ್ತದೆ. ಈಗಾಗಲೇ ಹೆಣ್ಣು ಮಕ್ಕಳ ವಿರುದ್ಧವಿರುವ ಭಾವನೆಗಳಿಗೆ ಮತ್ತಷ್ಟು ಗ್ರಾಸಸಿಗುತ್ತದೆ. ಹೆಣ್ಣು ಮಕ್ಕಳಿಗೆ ಸಿಕ್ಕಿರುವ ಅಲ್ಪ-ಸ್ವಲ್ಪ ಸ್ವಾತಂತ್ರ್ಯವು ಮಾಯವಾಗಿ ಪ್ರತಿನಿಮಿಷವೂ ಅವರನ್ನು ತಂದೆ-ತಾಯಿಗಳು ಕಾವಲು ಕಾಯಬೇಕಾದ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಅದರಲ್ಲೂ ಅಂತಹ ವೈಯಕ್ತಿಗಮನ-ರಕ್ಷಣೆ ನೀಡಲು ಸಾಧ್ಯವಾಗದ ಬಡ ಕೂಲಿಗಾರರ ಹೆಣ್ಣು ಮಕ್ಕಳ ಜೀವನ ನರಕವಾಗುತ್ತವೆ.

ಆದರೆ ಇತ್ತೀಚಿನ ಇದೇ ಡಿಸೆಂಬರ್ ತಿಂಗಳಿನಲ್ಲಿ ತೀರ್ಮಾನಗೊಂಡ ಇಂತಹುದೇ ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯವು ಸೆಷನ್ಸ್ ನ್ಯಾಯಾಲಯ ಉಚ್ಚನ್ಯಾಯಾಲಯ ಆರೋಪಿಗಳಿಗೆ ಕೊಟ್ಟು ಮರಣದಂಡೆಯನ್ನು ಒಪ್ಪಿಕೊಳ್ಳದೇ ಶಿಕ್ಷೆಯನ್ನು ಇಳಿಸಿ, ''ಅಪರೂಪದಲ್ಲಿಯೂ ಅಪರೂಪದ್ದಾದ ಪ್ರಕರಣ''ದಲ್ಲಿ ಮಾತ್ರ ಮರಣದಂಡನೆ ವಿಧಿಸಬೇಕೆಂದು ತಿಳಿಸಿದೆ. ಎಂದರೆ, ಇಂತಹ ಹೀನ ಅತ್ಯಾಚಾರದ ಕೃತ್ಯಗಳು ''ಅಪರೂಪದಲ್ಲಿಯೂ ಅಪರೂಪದ ಪ್ರಕರಣ'' ಆಗುವುದಿಲ್ಲವೇ ಎನ್ನುವ ಪ್ರಶ್ನೆಯನ್ನು ಇದು ಎತ್ತುತ್ತದೆ. ತಮ್ಮ ಕಾಮತೃಷೆ ತೀರಿಸಿಕೊಳ್ಳಲು ಯಾವುದಾದರೂ ಒಂದು ''ಹೆಣ್ಣು'' ಕೈಗೆ ಸಿಕ್ಕರೆ ಸಾಕು, ಆ ಹೆಣ್ಣು ಮುಗ್ಧ, ಎಳೆಯ, ಒಂದುವರ್ಷದ ಹೆಣ್ಣುಮಗುವಾದರೂ ಆದೀತು ಎನ್ನುವ ಮೃಗೀಯ ಭಾವನೆಯೇ ''ಅಪರೂಪ''ದ ಪ್ರಕರಣವಾಗುವುದಿಲ್ಲವೆ? ''ಅತಿ ಅಪರೂಪ''ದ ಪ್ರಕರಣ ಇದಾಗುವುದಿಲ್ಲ ಎನ್ನುವಾಗ ಆರೋಪಿಯ ಮೇಲೆ ಇರುವ ಸಹಾನುಭೂತಿ ವ್ಯಕ್ತವಾಗುವುದಿಲ್ಲವೆ? ಇಂದಿರಾಗಾಂಧಿ, ರಾಜೀವ್‌ಗಾಂಧಿಯರ ರಾಜಕೀಯ ಹತ್ಯೆಯ ಅಪರಾಧಿಗಳಿಗೆ ಮರಣದಂಡನೆ ವಿಧಿಸುತ್ತೇವೆ. ಅದು ಯಾವ ರೀತಿಯಲ್ಲಿ ''ಅತಿ ಅಪರೂಪದ'' ಪ್ರಕರಣ? -ಹೀಗೆ ಹಲವಾರು ಸಂದೇಹಗಳು ಮಹಿಳೆಯರನ್ನು ಕಾಡುವುದು ಸಹಜ. ಬಹುಶಃ ಮುಂದೆ ನೋಡುವ ದೃಷ್ಟಿ ಬದಲಾದಾಗ ತೀರ್ಪುಗಳು ಬದಲಾಗುತ್ತವೆ.

ಮೂರು ಪುಟ್ಟ ಪ್ರಸಂಗಗಳು

ಬೆಳಿಗ್ಗೆ ಕೆಲಸದ ಲಕ್ಕಮ್ಮ ಸಿಡಿಗುಟ್ಟುತ್ತಲೇ ಒಳಬಂದಳು. ಪಾತ್ರೆ ತೊಳೆಯುವಾಗಲೂ'' ಅವನ್ ಮನೆ ಹಾಳಾಗ ಅವಳ್ ನೆಗೆದ್‌ಬೀಳ'' ಎಂದು ಗೊಣಗುತ್ತಿದ್ದಳು ಎಂದೂ ಹೀಗೆ ಅಪ್‌ಸೆಟ್ ಆಗದ ಇವಳು ಹೀಗೇಕೆ ಎಂದು ಕೇಳಿದೆ. ''ನೋಡಮ್ಮಾರೆ ನಮ್ಮಕ್ಕನ ಮಗಳ ಗಂಡ ತೀರ್‍ಕೊಂಡ, ಅವಳತ್ತೆ ಮನೆಯವರು ಇವಳನ್ನು ಹೊರಕ್ಹಾಕದ್ರು, ಪಾಪ ಅಂತ ನಾನಿಲ್ಲಿಗೆ ಕರ್‍ಕೊಂಡ್ ಬಂದೆ ಒಂದೆರಡ್ ಮನೆ ಕೆಲ್ಸ ಕೊಡ್ಸಿ ನನ್ನ ಮನೇಲೇ ಮಡಿಕ್ಕೊಂಡ್ರೆ ಅವಳು ನನ್ನ ಗಂಡನ್ನೇ ಸರಿಮಾಡ್ಕಬಿಟ್ಟಿದ್ದಾಳೆ. '' ಏನಯ್ಯಾ ಇದ್ ನ್ಯಾಯವಾ'' ಅಂತ ಕೇಳಿದ್ದಕ್ಕೆ ಆ ಬೇವರ್ಸಿಬಡ್ಡೀಮಗ ನನ್ನೇ ದನ ಬಡಂದಂಗ್ ಬಡ್ದ, ಅದ್ಕೂ ಹಾಳಾಗ್ ಹೋಗ್ಲೀಂತ ಸುಮ್ನೆ ಇದ್ರೆ, ನಿನ್ನ ಸಂಜೆ ನಾಕೆಲ್ಸ ಮುಗ್ಸಿಹೋಗೋ ಹೊತ್ಗೆ ನನ್ನಾ ದೊಡ್ ಹಿತ್ಲಾಳೆ ಕೊಳಿದಪ್ಪಲೆ, ಅನ್ನ ಮಾಡೋ ಪಾತ್ರೆ ಪರಡಿ, ನನ್ನವೆರಡು ಸೀರೆ ಎಲ್ಲಾ ಎತ್ಕೊಂಡ್ ಇಬ್ರೂ ನಾಪತ್ತೆಯಾಗ್ ಬುಟ್ಟವರೆ ಅಮ್ಮಾರೆ ಇವರಿಗೆ ಬರಬಾರದ್ ರೋಗ ಬರಬೇಕಾ ಬ್ಯಾಡವಾ? ಓಗ್ಲಿ ನಿಮ್ಮ ತಾವ ಮಡಗಿದೀನಲ್ಲ ವಾಲೆಗೇಂತ ನಾನೂರು ರೂಪಾಯಿ ಅದ್ನ ಇವತ್ ಕೊಡ್ರಿ, ಪಾತ್ರೆ ಪರಡಿ ಕೊಂಡ್ಕಂಡ್‌ತೀನಿ''.

ಅದೇ ಹೊತ್ತಿಗೆ ಟಿ.ವಿಯಲ್ಲಿ 'ರಿಹಾಯಿ' ಚಿತ್ರದ ನಿರ್ದೇಶಕಿ ಶ್ರೀಮತಿ ಅರುಣರಾಜೇರವರ ಸಂದರ್ಶನ ಬರುತ್ತಿತ್ತು. ಆಕೆ ಹೇಳುತ್ತಿದ್ದರು ''ಒಂಬತ್ತು ವರ್ಷದ ನನ್ನ ಮಗಳಿಗೆ ಕ್ಯಾನ್ಸರ್ ಆಗಿತ್ತು. ಆಗಲೂ ನಾನು ನನ್ನ ಗಂಡನೊಂದಿಗೆ ಚಲನಚಿತ್ರದ ಕೆಲಸಗಳನ್ನು ಮಾಡಿಕೊಡುತ್ತಿದ್ದೆ. ಆ ಸಮಯದಲ್ಲಿ ನನ್ನ ಸಹಾಯಕ್ಕೆಂದು ನನ್ನ ಒಬ್ಬ ಗೆಳತಿ ನನ್ನ ಮನೆಗೆ ಬಂದಳು. ಕೆಲವು ತಿಂಗಳುಗಳಲ್ಲಿ ನನ್ನ ಮಗಳು ತೀರಿ ಕೊಂಡಳು. ಈ ಸಾವು ಘಟಿಸಿ 24 ಗಂಟೆ ಸಹ ಆಗಿರಲಿಲ್ಲ ನನ್ನ ಪತಿ ನನ್ನ ಗೆಳತಿಯೊಂದಿಗೆ ಸಂಸಾರ ಮಾಡುವುದಾಗಿ ತಿಳಿಸಿ ನನ್ನಿಂದ ವಿಚ್ಛೇದನ ಕೇಳಿದ. ನನ್ನ ಕೈಯಲ್ಲಿ ಏಳು ವರ್ಷದ ಮತ್ತೊಂದು ಮಗುವಿತ್ತು ಅದರ ಸಲುವಾಗಿಯಾದರೂ ನಾನು ನನ್ನ ಪ್ರಾಣ ಮತ್ತು ಕೆಲಸಗಳನ್ನು ಬಳಸಿಕೊಳ್ಳಬೇಕಾಗಿತ್ತು ಆದ್ದರಿಂದಲೇ ನಾನು ಸ್ವತಂತ್ರ ನಿರ್ದೇಶಕಿಯಾಗಿ ರೂಪುಗೊಂಡೆ''.

ಐವತ್ತಾರು ವರ್ಷದ ನನ್ನ ಕಸಿನ್ ಒಬ್ಬಳು ತನ್ನ ಗಂಡನ ಜೊತೆ ಉತ್ತರ ಭಾರತ ಪ್ರವಾಸ ಹೋಗಿದ್ದವಳು ಸನ್‌ಸ್ಟ್ರೋಕ್ ಆಗಿ ತೀರಿ ಕೊಂಡಳು. ಅವಳ ಮಗಳಿಗೆ ಮದುವೆಯಾಗಿ ಮೂರು ವರ್ಷದ ಮಗುವೊಂದಿದೆ. ಮಗ ಬೆಂಗಳೂರಲ್ಲಿ ವ್ಯಾಪಾರ ವ್ಯವಹಾರದಲ್ಲಿ ಲಕ್ಷ ಲಕ್ಷಗಳಿಸುವ ಧೀಮಂತ! ಅವನಿಗೆ ಹೆಣ್ಣು ಹುಡುಕುವ ಸಂಭ್ರಮದಲ್ಲಿದ್ದಾಗಲೇ ಈಕೆಯ ಸಾವು ಘಟಿಸಿತು. ಅರವತ್ತು ವರ್ಷದ ಗಂಡ, ಹೆಂಡತಿ ಸತ್ತ ಒಂಬತ್ತನೇ ದಿನವೇ ತನಗೆ ಮತ್ತೊಂದು ಹೆಣ್ಣು ನೋಡಲು ತೊಡಗಿದ. ತಾಯಿಯ ಹಠಾತ್ ಸಾವಿನ ವಾಸ್ತವವನ್ನು ಸ್ವೀಕರಿಸಲಾಗದ ಮಗಳು ಮಾನಸಿ ಮಾನಸಿಕ ತೊಳಲಾಟವನ್ನು ಅನುಭವಿಸುತ್ತಿರುವಾಗಲೇ, ಇಪ್ಪತ್ತೇ ದಿನಕ್ಕೆ ಈತ ಮರು ಮದುವೆಯಾದ! ಮಕ್ಕಳ ಪಾಲಿಗೆ ಅಮ್ಮನ ಮೂವತ್ತೂರು ವರ್ಷದ ವೈವಾಹಿಕ ಬದುಕು ಬರಿ ಸುಳ್ಳೇ ಎನ್ನುವಂತೆ ಮಾಡಿದ!!

ಒಂದೆಡೆ ಬದಲಾಗುತ್ತಿರುವ ಎಲ್ಲ ಮೌಲ್ಯಗಳನ್ನೂ ಎತ್ತಿ ಹಿಡಿಯುತ್ತಾ ಮಹಿಳೆಯರ ಸ್ಥಾನಮಾನಗಳು ನಿಜಕ್ಕೂ ಗಟ್ಟಿಗೊಳ್ಳುತ್ತಿದೆ ಎಂದು ಬಿಂಬಿಸಲಾಗುತ್ತಿದೆ. ಮತ್ತೊಂದೆಡೆ ಗಂಡಿನ ಸ್ವಚ್ಛಂದತೆ ಯಾವ ಅಡೆ ತಡೆಯಿಲ್ಲದೆ ಚಿಗುರುತ್ತಲೇ ಇದೆ.

ಈ ಮೇಲಿನ ಪ್ರಸಂಗಗಳು ಇಲ್ಲಿ ಮೂರಿರಬಹುದು ಇದು ಮೂವತ್ತು ಮನ್ನೂರು, ಮೂರು ಸಾವಿರ, ಮೂರು ಲಕ್ಷ ಆಗುವುದಿಲ್ಲ ಎನ್ನುವುದಕ್ಕೆ ಏನು ಖಾತರಿ?

ಶಾಂತಾನಾಗರಾಜ್

ಬೆಳ್ಳಿ ಶಿಖರವೇರಿದ ಸುಮಂಗಲಿ

ಇತ್ತೀಚೆಗೆ ಬೆಳ್ಳಿಹಬ್ಬ ಆಚರಿಸಿದ ಹೆಬ್ಬಾಳದ ಚೋಳನಾಯಕನ ಹಳ್ಳಿಯ ಸುಮಂಗಲಿ ಸೇವಾಶ್ರಮ ಕರ್ನಾಟಕದ ಹೆಮ್ಮೆಯ ಶಿಖರಗಳಲ್ಲೊಂದು. ಇಂದು ಇನ್ನೂರು ಹೆಣ್ಣು ಮಕ್ಕಳ ತಾಯಂದಿರನ್ನೊಳಗೊಂಡ ಸೇವಾಶ್ರಮವಿದು. ಹೆಣ್ಣು ಮಕ್ಕಳ ಆರ್ಥಿಕ, ಸಾಮಾಜಿಕ ಸ್ವಾವಲಂಬನೆಯ ದಾರಿದೀಪವಾಗಿ, ಮಾದರಿ ಸಂಸ್ಥೆಯಾಗಿ ಕೆಲಸ ಮಾಡುತ್ತಿದೆ. ಮಹಿಳೆಯರ ಆರ್ಥಿಕ ಸ್ವಾವಲಂಬನೆಯ ನಿಟ್ಟಿನಲ್ಲಿ ಕೈಮಗ್ಗ ತರಬೇತಿ, ಹೊಲಿಗೆ, ನಿಟ್ಟಿಂಗ್,ಡೆಕೋರೇಷನ್, ಪೌಲ್ಟ್ರಿಫಾರ್ಮಿಂಗ್, ಬಟ್ಟೆ ಹಾಗೂ ಪಾತ್ರೆ ತೊಳೆಯುವ ಪುಡಿ ತಯಾರಿಕೆ, ಮೊಂಬತ್ತಿ, ಬೊಂಬೆ ಮತ್ತು ಸುಂದರ ರತ್ನಗಂಬಳಿಗಳ ತಯಾರಿಕೆ, ಕೂಲಿ ತಾಯಿಯವರ ಮಕ್ಕಳಿಗೆ ಉಚಿತ ಕ್ರೆಷ್ ಮುಂತಾದವು ಮಹತ್ವದ ಪಾತ್ರ ವಹಿಸಿವೆ. ಇದರ ಜೊತೆಗೆ ಅಂಗನವಾಡಿ, ಸಾಕ್ಷರತೆ, ಮಹಿಳಾ ಸಾಕ್ಷರತಾ ಶಿಬಿರಗಳು ಮತ್ತು ಕುಟುಂಬ ನ್ಯಾಯ ದೊರಕಿಸುವ ಪ್ರಯತ್ನಗಳು ಆಶ್ರಮದ ವ್ಯಾಪ್ತಿಯನ್ನು ಹಿಗ್ಗಿಸಿವೆ. ಇಪ್ಪತ್ತೈದು ವರ್ಷಗಳ ಅವಧಿಯಲ್ಲಿ ಇಷ್ಟೊಂದು ಮೇರು ಸಾಧನೆಯನ್ನು ಹೊಂದಿರುವ ಆಶ್ರಮದ ಆರಂಭದ ದಿನಗಳ ಕಲ್ಲುಮುಳ್ಳಿನ ಕತೆ ಯಾವುದೇ ಮಹತ್ ಕಾರ್ಯದ ಬೆಳವಣಿಗೆಯ ಮಾದರಿ ಕತೆಯಂತಿದೆ. ಆದರೆ ಇಷ್ಟೆಲ್ಲ ಸಾಧಿಸಿ ಜನಮನ್ನಣೆ, ಮಾನ್ಯತೆಗಳಿಸಿದ ಮೇಲೂ ಈ ಸಂಸ್ಥೆ ಇಂದು ಎದುರಿಸಬೇಕಾಗಿರುವ ಅನಗತ್ಯ ಸವಾಲುಗಳು, ಅನಪೇಕ್ಷಣೀಯ ಹುಸಿ ಆರೋಪಗಳು ನಾವು ಇಂದು ಬದುಕುತ್ತಿರುವ ಸಮಾಜದ ಕೊಳಕು ರಾಜಕೀಯದ ದುರಂತಕ್ಕೆ ಕೈಗನ್ನಡಿಯಾಗಿವೆ.

ಇಪ್ಪತ್ತೈದು ವರ್ಷಗಳ ಹಿಂದೆ ಹೆಬ್ಬಾಳದ ಒಂದು ಪುಟ್ಟ ಮನೆಯಲ್ಲಿ ಆರಂಭವಾದ ಸುಮಂಗಲಿ ಸೇವಾಶ್ರಮ 1975ರ ಅಕ್ಟೋಬರ್ 16ರಂದು ವಿಧ್ಯುಕ್ತವಾಗಿ ಆರಂಭವಾಯಿತು. ಮಕ್ಕಳಿಗೆ, ಮಹಿಳೆಯರಿಗೆ, ದುರ್ಬಲರಿಗೆ-ಜೀವನದಲ್ಲಿ ನೊಂದವರಿಗೆ ನೆಮ್ಮದಿ, ಆಸರೆಯನ್ನು ಕೊಡುವ ದೃಷ್ಟಿಯಿಂದ ಅಂತಹ ಕಾಯಕದಲ್ಲಿ ನಿಷ್ಠೆಯಿರುವ ಸಮಾನ ಮನಸ್ಕರೆಲ್ಲ ಸೇರಿ ಕಷ್ಟಪಟ್ಟು ದುಡಿದು ಆಶ್ರಮ ಕಟ್ಟಿದರು. ಈ ಸಂಘಟಿತ ಪ್ರಯತ್ನದ ಮುಖ್ಯ ರೂವಾರಿ ಶ್ರೀಮತಿ ಎಸ್.ಜಿ. ಸುಶೀಲಮ್ಮ. ಇಂದು ಸುಶೀಲಮ್ಮ ಅವರು ಕಟ್ಟಿದ ಸುಮಂಗಲಿ ಸೇವಾಶ್ರಮ ಬೆಂಗಳೂರಿನಲ್ಲೇ ಏಕೆ, ಇಡೀ ಕರ್ನಾಟಕದಲ್ಲಿ ಹಾಗೂ ಅದರಾಚೆಗೂ ಪರಿಚಿತ ಹೆಸರಾಗಿದೆ. ಈ ಆಶ್ರಮದ ತಂಪಿನಲ್ಲಿ ಹೊಸಬೆಳಕು ಕಂಡ ಜೀವಗಳು ಹಲವಾರು. ಇಂದು ಎಸ್.ಜಿ. ಸುಶೀಲಮ್ಮ ಮತ್ತು ಸುಮಂಗಲಿ ಸೇವಾಶ್ರಮ ಎರಡೂ ಬೇರ್ಪಡಿಸಲಾಗದ ಹೆಸರುಗಳಾಗಿವೆ. ಎಸ್.ಜಿ. ಸುಶೀಲಮ್ಮನವರ ಬದುಕು ಮತ್ತು ಚಿಂತನೆ ಹಾಗೂ ಸುಮಂಗಲಿ ಸೇವಾಶ್ರಮ ಬೆಳೆಯುತ್ತಿರುವ ರೀತಿ ಯಾವುದೇ ನಾಡಿಗೇ ಹೆಮ್ಮೆ ತರುವ ಸಂಗತಿಗಳಾಗಿ ಕಾಣುತ್ತವೆ.

ಅರವತ್ತೆರಡು ವರ್ಷಗಳ ಹಿಂದೆ ಬೆಂಗಳೂರಿನ ಚಾಮರಾಮಪೇಟೆಯಲಿ ಅನುಕೂಲವಂತ ನೇಕಾರ ಕುಟುಂಬದಲ್ಲಿ ಜನಿಸಿ ಸುಶೀಲಮ್ಮ ಸುಖದ ದಿನಗಳಂತೆ ಕಷ್ಟದ ದಿನಗಳನ್ನೂ ಕಂಡವರು. ಎರಡನೇ ಮಹಾಯುದ್ಧದ ಸಮಯದಲ್ಲಿ ಅವರ ತಂದೆ ಎದುರಿಸಿದ ವ್ಯಾಪಾರದ ನಷ್ಟದಿಂದ ಅವರ ಕುಟುಂಬ ಸಂಕಷ್ಟಗಳನ್ನು ಎದುರಿಸಬೇಕಾಗಿ ಬಂತು. ಆಗ ಶಾಲೆ ಕಲಿಯುತ್ತಿದ್ದ ಬಾಲಕಿ ಸುಶೀಲಮ್ಮ ಟ್ಯೂಷನ್ ಹೇಳಿ ತಂದೆಗೆ ನೆರವಾದರು. ತಂದೆ ಮರಣಾನಂತರ ಪಿ.ಯು.ಸಿ ಓದುತ್ತಿದ್ದ ಸುಶೀಲಮ್ಮ ಮಧ್ಯದಲ್ಲಿ ಓದು ನಿಲ್ಲಿಸಿ ರೆಮ್ಕೋ ಫ್ಯಾಕ್ಟರಿಯಲ್ಲಿ ಕೆಲಸಕ್ಕೆ ಸೇರಿದರು ಮತ್ತು ಫ್ಯಾಕ್ಟರಿಯೇ ನಡೆಸುತ್ತಿದ್ದ ಬಾಲವಾಡಿಯಲ್ಲಿ ವಿಶೇಷ ಆಸಕ್ತಿ ತೋರಿದರು. ಎಳೆತನದಿಂದ ಗೀಳಾಗಿ ಅಂಟಿದ ಸಮಾಜಕಾರ್ಯ ಅವರು ಹೋದಲ್ಲೆಲ್ಲಾ ವ್ಯಾಪಿಸಿ ಮನದಲ್ಲೇ ಹೆಮ್ಮರವಾಗಿ ಬೆಳೆದು ನಿಂತಾಗ ಅವರಿಗೆ ಫ್ಯಾಕ್ಟರಿಯ ಕೆಲಸ ಮುಂದುವರೆಸಲಾಗಲಿಲ್ಲ. ಆ ವೇಳೆಗಾಗಲೇ ಮದುವೆಯಾಗಿ ಮೂರು ಮಕ್ಕಳ ತಾಯಿಯಾಗಿದ್ದ ಅವರ ಮನಸ್ಸು ಆಧ್ಯಾತ್ಮದತ್ತ ಸೆಳೆದಿತ್ತು. ಮಾತೆ ಮಹಾದೇವಿಯಿಂದ ಆಕರ್ಷಿತರಾಗಿದ್ದರು. ಈ ಎಲ್ಲ ಸೆಳೆತಗಳ ಹಿನ್ನೆಲೆಯಲ್ಲಿ ಫ್ಯಾಕ್ಟರಿಗೆ ರಾಜೀನಾಮೆ ಕೊಟ್ಟು ಗಂಡನಿಗೆ ಮತ್ತೊಂದು ಮದುವೆಯಾಗಲು ಹೇಳಿ ಬಂಧನದಿಂದ ಮುಕ್ತರಾಗಿ ಮೂರು ಮಕ್ಕಳೊಂದಿಗೆ ಮನೆಯಿಂದ ಹೊರಬಿದ್ದ ಸುಶೀಲಮ್ಮ ಈಗ ಒಂದು ದೊಡ್ಡ ಸೇವಾಶ್ರಮದ ರೂವಾರಿಯಾಗಿ ನಮ್ಮ ಕಣ್ಣ ಮುಂದೆ ನಿಲ್ಲುತ್ತಾರೆ.

ಸುಶೀಲಮ್ಮನವರ ಚಿಂತನೆ ಮತ್ತು ಕ್ರಿಯೆಗಳು ನಿಜವಾದ ಸ್ತ್ರೀವಾದಿ ಸಿದ್ಧಾಂತದ ಹಲವು ಮುಖಗಳನ್ನು ಪರಿಚಯ

ಮಾಡಿಕೊಡುತ್ತವೆ. ಹೆಣ್ಣಿನ ಸಾಮರ್ಥ್ಯ ಮತ್ತು ನಿಷ್ಠೆಯ ಬಗ್ಗೆ ಅವರಿಗೆ ಎಷ್ಟೊಂದು ಅಚಲ ವಿಶ್ವಾಸವೆಂದರೆ ಮಹಿಳೆ ಮನಸ್ಸು ಮಾಡಿದರೆ ಏನನ್ನಾದರೂ ಸಾಧಿಸಬಲ್ಲಳು ಎಂಬುದು ಅವರ ನಂಬಿಕೆ. ಅದಕ್ಕೆ ಫಲಶ್ರುತಿಯಾಗಿ ಈಗ ಮೂರ್ತವಾಗಿ ನಿಂತಿದೆ ಸುಮಂಗಲಿ ಸೇವಾಶ್ರಮ. ಆಶ್ರಮದ ಸಕಲ ಕಾರ್ಯಗಳನ್ನು ಮಹಿಳೆಯರೇ ನಡೆಸುತ್ತಾರೆ. ಪುರುಷದ್ವೇಷಿಯೇನೂ ಅಲ್ಲದ ಸುಶೀಲಮ್ಮ ಮಹಿಳೆಯರಿಗೇ ಸಾಮರ್ಥ್ಯವಿರುವಾಗ ಅನಗತ್ಯವಾಗಿ ಪುರುಷರನ್ನು ಅವಲಂಭಿಸಬೇಕಿಲ್ಲವೆಂದು ನಂಬಿದವರು. ಮಹಿಳೆಯರು ಯಾರೇ ಆಗಲಿ ಯಾವುದೇ ಕಾರ್ಯಕ್ರಮ ಮಾಡಲೀ ಸುಶೀಲಮ್ಮನವರ ಪ್ರೋತ್ಸಾಹ, ಬೆಂಬಲ ಅದಕ್ಕಿರುತ್ತದೆ. ಸರ್ಕಾರದಿಂದಾಗಲೀ, ಸಾಮಾಜಿಕ ಸಂಸ್ಥೆಗಳಿಂದಾಗಲಿ ತಮಗೆ ಸಿಗುವ ಎಷ್ಟೋ ಉದ್ಯೋಗದ ಅವಕಾಶಗಳನ್ನು ಬೇರೆ ಸಂಘ ಸಂಸ್ಥೆಗಳಿಗೆ ಹಂಚಿಸಿದ್ದಾರೆ. ಯಾರು ಏನೇ ಮಾಡಲಿ, ಒಟ್ಟಾರೆಯಾಗಿ ಮಹಿಳೆಯರ ಶ್ರೇಯೋಭಿವೃದ್ಧಿಯಾದರೆ ಸಾಕು ಎನ್ನುವ ಸುಶೀಲಮ್ಮನವರಿಗೆ ಬ್ಯಾನರ್, ಕೀರ್ತಿ ಪತಾಕೆಗಳ ಹುಚ್ಚಿಲ್ಲ. ಸುಶೀಲಮ್ಮನವರ ಈ ಮನೋಭಾವದಿಂದ ನಮ್ಮ ಮಹಿಳಾ ಸಂಘಟನೆಗಳು ಕಲಿಯುವುದು ಬಹಳಷ್ಟಿವೆ.

ಸುಮಂಗಲಿ ಸೇವಾ ಶ್ರಮದಿಂದ ಸಹಾಯ ನಿರೀಕ್ಷಿಸಿ. ಕರ್ನಾಟಕದ ವಿವಿಧ ಭಾಗಗಳಿಂದ, ವಿವಿಧ ವರ್ಗಗಳಿಂದ ಮಹಿಳೆಯರು ಬರುತ್ತಾರೆ. ಅವಿದ್ಯಾವಂತ ಕೂಲಿ ಜನರಿಂದ ಹಿಡಿದು ಸುಶಿಕ್ಷಿತರಾದವರು, ವೈದ್ಯರು, ಪೋಲಿಸ್ ಇನ್‌ಸ್ಪೆಕ್ಟರುಗಳು, ಹಲವಾರು ವೃತ್ತಿಗಳಲ್ಲಿರುವವರು ಬೇರೆ ಬೇರೆ ಜಿಲ್ಲೆಗಳಿಂದ ಕೌಟುಂಬಿಕ ಸಮಸ್ಯೆಗಳನ್ನು ಹೊತ್ತ ಮಂದಿ ಆಶ್ರಮಕ್ಕೆ ಬರುತ್ತಾರೆ. ಆಶ್ರಮವು ನಡೆಸುವ ಕೌಟುಂಬಿಕ ಸಲಹಾ ಕೇಂದ್ರ ಹಲವಾರು ನೊಂದ ಮಂದಿಗೆ ಕಣ್ಣೀರು ಒರೆಸಿದ; ಬದುಕಿನ ಕಗ್ಗಂಟನ್ನು ಬಿಡಿಸಿದೆ. ಅನಾಥರಾದ, ಓದಲು ಅವಕಾಶವಿರದ ಹೆಣ್ಣುಮಕ್ಕಳು ಆಶ್ರಮದಲ್ಲಿ ಆಶ್ರಯ ಕೋರಿ ಬರುತ್ತಾರೆ. ಭಗ್ನ ಪ್ರೇಮ ವಿವಾಹಗಳಿಂದ ನೊಂದ ಮಹಿಳೆಯರು, ವರದಕ್ಷಿಣೆ-ಕೌಟುಂಬಿಕ ಹಿಂಸೆಗಳಿಂದ ನೊಂದ ಹೆಣ್ಣುಗಳು ಇಲ್ಲಿ ಆಶ್ರಯ ಕೋರಿ ಬರುತ್ತಾರೆ. ಕೂಲಿ ಮಾಡುವ ತಾಯಂದಿರ ಮಕ್ಕಳಿಗಾಗಿ ಉಚಿತ ಕ್ರೆಷ್ ವ್ಯವಸ್ಥೆ ಇಲ್ಲಿದೆ.

ಸುಮಂಗಲಿ ಸೇವಾಶ್ರಮದ ಅದ್ಭುತ ಸಾಧನೆಗೆ ಮತ್ತು ಅದರ ಅಧ್ಯಕ್ಷರಾದ ಎಸ್. ಜಿ. ಸುಶೀಲಮ್ಮನವರ ಉದಾತ್ತ ವ್ಯಕ್ತಿತ್ವಕ್ಕೆ ರಾಷ್ಟ್ರ, ರಾಜ್ಯಗಳ ಮನ್ನಣೆ ದೊರೆತಿದೆ. 1984ರ ರಾಜ್ಯ ಪ್ರಶಸ್ತಿ, 1985ರ ರಾಷ್ಟ್ರೀಯ ಪುರಸ್ಕಾರ, 1991-92ನೆಯ ಸಾಲಿನ ಬಾಬಾಸಾಹೇಬ್ ಅಂಬೇಡ್ಕರ್ ರಾಷ್ಟ್ರೀಯ ಪ್ರಶಸ್ತಿ, 94-95ನೇ ಸಾಲಿನ ಜಾನಕಿದೇವಿ ಬಜಾಜ್ ಪ್ರಶಸ್ತಿ, 1996ರ ಲಕ್ಷ್ಮಿ ಮೆನನ್ ಪ್ರಶಸ್ತಿ ಮತ್ತು ಕಳೆದ ವರ್ಷ ಕರ್ನಾಟಕ ಸರ್ಕಾರವು ನೀಡಿದ ಕಿತ್ತೂರು ಚೆನ್ನಮ್ಮ ಪ್ರಶಸ್ತಿ ಮತ್ತು ಈ ವರ್ಷದ ರಾಜ್ಯೋತ್ಸವ ಪ್ರಶಸ್ತಿಗಳು ಸೇವಾಶ್ರಮದ ಸಾರ್ಥಕ ಕಾರ್ಯಗಳಿಗೆ ಸಿಕ್ಕ ಮನ್ನಣೆಯಾಗಿದೆ. ಪ್ರಶಸ್ತಿಗಳ ಮೂಲಕವಷ್ಟೇ ಅಲ್ಲದೆ, ಕರ್ನಾಟಕ ಸರ್ಕಾರವು ಅಂಗನವಾಡಿ ಪ್ರಾಜೆಕ್ಟ್ ನಡೆಸಲು ಗ್ರಾಮೀಣ ಮಹಿಳೆಯರಿಗೆ ಜಾಗೃತಿ ಶಿಬಿರಗಳನ್ನು ನಡೆಸಲು, ಚುನಾಯಿತ ಮಹಿಳೆಯರಿಗೆ ತರಬೇತಿ ಶಿಬಿರ ಹಾಗೂ ಉದ್ಯಮಶೀಲ ಮಹಿಳೆಯರಿಗೆ ಶಿಬಿರಗಳನ್ನು ನಡೆಸಲು ಹಲವಾರು ಯೋಜನೆಗಳನ್ನು ನಿರ್ವಹಿಸಲು ಆಶ್ರಮವನ್ನು ಕೋರಿದೆ. ಆಶ್ರಮವು ಸರ್ಕಾರ ಮತ್ತು ಜನರ ನಡುವೆ ಕಾರ್ಯ ನಿರ್ವಹಿಸಿ ಪಡೆದುಕೊಂಡ ಜನಪ್ರಿಯತೆ ಕೆಲವರಲ್ಲಿ ಅಸೂಯೆ, ಅತೃಪ್ತಿಯನ್ನು ಹುಟ್ಟಿಹಾಕಿದೆ, ಇದೂ ಸಹಜವೇ ಆದರೂ ಇಂತಹ ಭಾವನೆಗಳಿಂದ ಕೆಲಸ ಮಾಡುವ ಎನ್.ಜಿ.ಓಗಳು ಸುಮಂಗಲಿ ಸೇವಾಶ್ರಮಕ್ಕೆ ಮಸಿಬಳೆಯುವ ಪ್ರಯತ್ನ ಮಾಡುತ್ತಿದ್ದಾರೆ. 'ವಿಕಾಸ'ದಂತಹ ಎನ್. ಜಿ. ಓಗಳು ಅವರಂತೆ ಯೋಚಿಸುವ ಕೆಲವೊಂದು ಸಂಘ ಸಂಸ್ಥೆಗಳು ಆಶ್ರಮದ ವಿರುದ್ಧ ಸತತ ಅಪ ಪ್ರಚಾರ ಮಾಡುತ್ತಾ ತಮ್ಮ ನಿಜಸ್ವರೂಪವನ್ನು ಬಯಲು ಮಾಡಿಕೊಳ್ಳುತ್ತಿವೆ. ಆದರೆ ಸುಶೀಲಮ್ಮನವರ ವ್ಯಕ್ತಿತ್ವ ಮತ್ತು ಸುಮಂಗಲಿ ಸೇವಾಶ್ರಮದ ಕಾರ್ಯ ಚಟುವಟಿಕೆಗಳೆರಡೂ ಇಂತಹ ವಿಧ್ವಂಸಕ ಪ್ರವೃತ್ತಿಗಳಿಗೆ ಸವಾಲೆಸೆದು ಸತ್ಯದರ್ಶನ ಮೂಡಿಸುವುದರಲ್ಲಿ ಆಶ್ಚರ್ಯವಿಲ್ಲ. ''ನಾನು ಹೊಗಳಿಕೆಗೂ ತೆಗಳಿಕೆಗೂ ಕಿವಿಗೊಡುವುದಿಲ್ಲ, ಯಾವುದಾದರೂ ಒಂದಿಟ್ಟುಕೊಂಡರೆ ಕಷ್ಟ, ಎರಡೂ ಬೇಡ ಅಂದರೆ ಚಿಂತೆಯಿಲ್ಲ. ಸಮಾಜ ಕಾರ್ಯ ಮಾಡಲು ಬಂದವರಿಗೆಲ್ಲ ''ನಾನು ಹೇಳುವುದಿಷ್ಟೆ. ನೀವು ನೇಮ್ ಮತ್ತು ಫೇಮ್ ಮೇಲೆ ಕಣ್ಣಿಟ್ಟು ಕೆಲಸ ಮಾಡಬೇಡಿ, ಎಂದು '' ಎನ್ನುವ ಸುಶೀಲಮ್ಮನವರ ಈ ಜೀವನ ತತ್ವವೇ ಆಶ್ರಮವನ್ನು ಕಾಯುತ್ತಿದೆ.

★

ಅಫ್ಘಾನಿಸ್ತಾನದ ಮಹಿಳೆಯ ಅತಂತ್ರ ಸ್ಥಿತಿ

-ಎಚ್.ಎನ್.ಗೀತಾ

ಬಾಜಿಯಾಳಿಗೆ ಓಡಾಟವೋ ಓಡಾಟ. ಪುರುಸೊತ್ತಿಲ್ಲದಷ್ಟು ಓಡಾಟ. ಓಡಾಟ. ಎಂದ ಮಾತ್ರಕ್ಕೆ ಆಕೆ ಗ್ಲೋಬ್ ಟ್ರ್ಯಾಟಿಂಗ್ ಮಹಿಳೆ ಎಂದು ಭಾವಿಸಬೇಡಿ, ಪಾಪ, ಅವಳ ಈ ಓಡಾಟ ಜಬರ್ದಸ್ತಿನದಲ್ಲ; ತಲೆ ಮರೆಸಿಕೊಂಡು ಓಡಾಡುವ ತಾಪತ್ರಯದ್ದು.

ಬಾಜಿಯಾಳ ಈ ತಾಪತ್ರಯ ನಿನ್ನೆ ಮೊನ್ನೆಯದಲ್ಲ. ನಾಲ್ಕು ವರ್ಷಗಳಿಂದ ಅವಳದ್ದು ಇದೇ ಪಾಡು. ಅವಳಂತಹ ಅನೇಕ ಹೆಣ್ಣು ಮಕ್ಕಳದೂ ಇದೇ ಪಾಡು. ಏಕೆಂದರೆ ಅವರಿರುವುದೇ ಆಫ್ಘಾನಿಸ್ತಾನದಲ್ಲಿ ಹಾಗೂ ಆಫ್ಘಾನಿಸ್ತಾನ ಇರುವುದೇ ತಾಲಿಬಾನ್ ಮುಷ್ಠಿಯಲ್ಲಿ !

20 ವರ್ಷಗಳಿಂದ ಕದನ ಕಾದಾಟಗಳಲ್ಲಿ ಜರ್ಝರಿತವಾಗಿದ್ದ ಆಫ್ಘಾನಿಸ್ತಾನ ನಾಲ್ಕು ವರ್ಷಗಳ ಹಿಂದೆ, ಅಂದರೆ 1996ರಲ್ಲಿ ತಾಲಿಬಾನ್ ಕೈಗೆ ಸಿಕ್ಕಿಹಾಕಿಕೊಂಡಿತ್ತು. ಅಂದಿನಿಂದ ಇಂದಿನವರೆಗೆ ದಿನಕ್ಕೊಂದು ಫತ್ವಾ. ದಾಡಿ ಬೋಳಿಸಿದ ಗಂಡಸಿಗೆ ಕೆಲಸ ಸಿಗದು ಎಂದ ಮೇಲೆ ಮಹಿಳೆಯರಿಗಿರುವ ಕಟ್ಟುಪಾಡುಗಳ ಕುರಿತು ಹೇಳಬೇಕಾಗಿಯೇ ಇಲ್ಲ. ಮಹಿಳೆಯರು ನೌಕರಿಮಾಡುವಂತಿಲ್ಲ; ಮನೆಯಾಚೆ ಕಾಲಿಡುವಂತೆಯೂ ಇಲ್ಲ, ದರ್ಜಿಯ ಬಳಿಗೆ ಕೂಡ ಹೋಗುವಂತಿಲ್ಲ. ಹುಡುಗಿಯರಿಗೆ ಓದುಬರಹ ಸಲ್ಲದು. ಹುಡುಗಿಯರ ಶಾಲಾ ಕಾಲೇಜುಗಳಿಗೆ ಬೀಗಮುದ್ರೆ. ಮದುವೆ ಸಮಾರಂಭಗಳಲ್ಲೂ ಸಂಗೀತ-ನೃತ್ಯ ಕೂಡದು. 'ನವ್‌ರೋಜ್' ಹಬ್ಬದ (ಹೊಸವರ್ಷದ ಹಬ್ಬ) ಆಚರಣೆಗೂ ಬಹಿಷ್ಕಾರ ಇಂತಹ ಉಸಿರು ಕಟ್ಟಿಸುವ ವಾತಾವರಣದಲ್ಲಿ ಇರಲು ಬಾಜಿಯಾ ಮತ್ತು ಅವಳ ಕುಟುಂಬದವರಿಗೆ ಸಾಧ್ಯವಾಗದೆ, ಅವರು ಕಾಬೂಲ್‌ನಿಂದ ಪರಾರಿಯಾದರು. 'ಪಶ್ತುನ್' ಪಂಗಡ, ಎನ್ನುವುದು ಆಫ್ಘಾನಿಸ್ತಾನದ ಬಲಿಷ್ಠ ಪಂಗಡ ಈ ಪಂಗಡದ ಮಹಿಳೆಯರು ವಿದ್ಯಾವಂತರೂ ಹೌದು. ಆದರೆ ತಾಲಿಬಾನ್‌ಗೆ ಇದರಿಂದ ಬಲು ಇರಿಸುಮುರಿಸು.

ಇಂತಹ ಪಶ್ತುನ್ ಪಂಗಡದ ಬಾಜಿಯಾ ಮತ್ತು ಕುಟುಂಬದವರು ಪರ್ವನ್ ಪ್ರಾಂತ್ಯಕ್ಕೆ ತಲೆ ಮರೆಸಿಕೊಂಡು ಹೋದರು. ಕಳೆದ ವರ್ಷ ಅಲ್ಲಿಂದ ತಲೋಖಾನ್‌ಗೆ ಓಟ ಕಿತ್ತರು. ಆದರೆ ತಲೋಖಾನ್ ಕೂಡ ಅವರ ಪಾಲಿಗೆ ಸುರಕ್ಷಿತ ಜಾಗವಾಗಿ ಉಳಿಯಲಿಲ್ಲ. ತಾಲಿಬಾನ್ ಪಡೆಗಳು ಅಲ್ಲೂ ತಾಂಡವ ನೃತ್ಯ ನಡೆಸಿದವು. ಮನೆಗಳು ಸುಟ್ಟು ಭಸ್ಮವಾದವು. ಹುಡುಗಿಯರನ್ನು ಅಪಹರಿಸಿಕೊಂಡು ಒಯ್ದರು. ಜೀವನದಲ್ಲಿ ಒಂದಷ್ಟು ನೆಮ್ಮದಿಯನ್ನು ಅರಸುತ್ತಾ ಬಾಜಿಯ ಮತ್ತು ಕುಟುಂಬದರವರು ಪರ್ವತ ಪ್ರದೇಶಗಳಲ್ಲೆಲ್ಲಾ ಅಲೆದಾಡಿಕೊಂಡು, ಕೊನೆಗೂ ಫೈಜಾಬಾದ್ ತಲುಪಿದರು.

ಫೈಜಾಬಾದಿನಲ್ಲಿ ಬಾಜಿಯಾ ತನ್ನ ಆಸೆ ಆಕಾಂಕ್ಷೆಗಳನ್ನು ಮತ್ತೆ ಚಿಗುರಿಸಿದ್ದಾಳೆ. 21 ವರ್ಷದ ಈಕೆ ಇಲ್ಲಿನ ವೈದ್ಯಕೀಯ ಕಾಲೇಜಿನಲ್ಲಿ ಪ್ರವೇಶ ಪಡೆದಿದ್ದಾಳೆ. ಈ ಕಾಲೇಜಿನಲ್ಲಿ ಕಲಿಯುವ ಹಂಬಲ ಜೀವಂತವಾಗಿಟ್ಟುಕೊಂಡಿರುವ ಇನ್ನೂ 14 ಮಂದಿ ಯುವತಿಯರಿದ್ದಾರೆ. ಈ ಕಾಲೇಜಾದರೂ ಎಂಥದ್ದು ಗೊತ್ತೆ? ಒಂದು ಲ್ಯಾಬೋರೇಟರಿ ಇಲ್ಲ. ಅಷ್ಟೇ ಏಕೆ-ವಿದ್ಯುತ್ ಸೌಕರ್ಯವೂ ಇಲ್ಲ. ಆದರೂ, ಆಫ್ಘಾನಿಸ್ತಾನದಲ್ಲಿ ಸಧ್ಯಕ್ಕಿರುವ ಅತ್ಯುತ್ತಮ ಕಾಲೇಜು ಇದೊಂದೇ.

ಫೈಜಾಬಾದ್ ಕಣಿವೆಯಲ್ಲಿರುವ ಒಂದು ಸಣ್ಣ ಹಳ್ಳಿ. ಆದರೆ ಮಹಿಳೆಯರ ಪಾಲಿಗೆ ಇದು ಒಂದು ಸ್ವರ್ಗ. ಏಕೆಂದರೆ ಇಲ್ಲಿ ತಾಲಿಬಾನ್ ಪ್ರದೇಶಗಳಿವೆಯೇ ಹೊರತು, ತಾಲಿಬಾನ್ ಆಡಳಿತವಿಲ್ಲ. ಹೀಗಾಗಿ ರಸ್ತೆಯಲ್ಲಿ ಓಡಾಡಲಿಕ್ಕೆ ಯಾವ ಅಡ್ಡಿ ಆತಂಕಗಳಿಲ್ಲ. ಮಹಿಳೆಯರು ನೌಕರಿಗೆ ಹೋಗಬಾರದೆನ್ನುವ ನಿಯಮವಿಲ್ಲ.

ಬುರ್ಕಾ ಮಾತ್ರ ಕಡ್ಡಾಯವೇ. ಆದರೂ, ಅತ್ತ ಇತ್ತ ಪುರುಷರಿಲ್ಲದಿರುವುದು ಖಾತ್ರಿಯಾದಾಗ ಅರೆಕ್ಷಣ ಮುಖದ ಮುಸುಕು ಸರಿಸಿ ನಿರಾಳ ಜೀವನದ ಕನಸು ಕಾಣುತ್ತಾರೆ ಈ ಮಹಿಳೆಯರು. ಆದರೆ ತಾಲಿಬಾನ್ ಪ್ರದೇಶಗಳಲ್ಲಿ ಹೀಗೆ ಮಾಡಿದರಾದರೆ, ಕೋಣೆ ಏಟು ಕಡ್ಡಾಯ.

RNI No. 45577/88

ಇವರ್ಯಾರು ಬುರ್ಕಾ ಪದ್ಧತಿಯನ್ನೇನು ವಿರೋಧಿಸುವುದಿಲ್ಲ. ಅದು ಇಸ್ಲಾಮಿಕ್ ಕಾನೂನು ಎಂದು ಮಾನ್ಯಮಾಡುತ್ತಾರೆ. ಆದರೆ ಮನೆಯೊಳಗೆ 'ಶೂನ್ಯ'ವಾಗಿ ಇರಬೇಕು ಎನ್ನುವ ಧೋರಣೆ ಮಾತ್ರ ಇವರಿಗೆ ಕುತ್ತಾಗಿ ಪರಿಣಮಿಸಿದೆ.

ಆಫ್ಘಾನಿಸ್ತಾದ ಪದಾಚ್ಯುತ ಅಧ್ಯಕ್ಷ ಬಿರ್ನಾಹುದೀನ್ ರಬ್ಬಾನಿಯವರೇನೋ ತಾವು ಮತ್ತೆ ಅಧಿಕಾರಕ್ಕೆ ಬರುವ ಆಸೆ ಇಟ್ಟುಕೊಂಡಿದ್ದಾರೆ. ಮಹಿಳೆಯರ ಕುರಿತು ಉದಾರ ನೀತಿ ರೂಪಿಸುವ ಭರವಸೆ ನೀಡಿದ್ದಾರೆ. ಬುರ್ಕಾ ಹೇರಿಕೆ ಕೂಡ ಇರುವುದಿಲ್ಲ ಎಂದಿದ್ದಾರೆ. ಆದರೆ, ಅದೆಲ್ಲ ದೂರದ ಮಾತು. 'ಆದರೆ' ಸಾಮ್ರಾಜ್ಯದ ಹೊಂಗನಸು. ಸಧ್ಯದ ಪರಿಸ್ಥಿತಿಯಲ್ಲಿ ಹತ್ತತ್ತು ಮಕ್ಕಳನ್ನು ಸಾಕಿ ಸಲಗುವ ಹೊಣೆ ಹೊಂದದಿರೆಗೆ ಬಂದಿದೆ. 12 ವರ್ಷಕ್ಕೆಲ್ಲ ಮದುವೆ. ಎರಡು ದಶಕಗಳಿಂದ ನಡೆಯುತ್ತಲೇ ಬಂದಿರುವ ಯುದ್ಧದಲ್ಲಿ, ಆಂತರಿಕ ಕಾದಾಟಗಳಲ್ಲಿ ಮಡಿದ ಗಂಡಂದಿರು. ಸ್ವಲ್ಪ ಸ್ಥಿತಿವಂತವಾಗಿದ್ದವರು ಪರದೇಶಗಳಿಗೆ ನಿರಾಶಿತರಾಗಿಯೇ ಹೋದರೂ ಉತ್ತಮ ಜೀವನ ನಡೆಸುತ್ತಿದ್ದಾರೆ. ಆದರೆ ಸ್ವಂತ ನೆಲದಲ್ಲೇ ನಿರಾಶ್ರಿತ ಜೀವನ ನಡೆಸುವವರೆಷ್ಟು ಜನ! ಮತಾಂಧತೆ ಎಂಬುದು ವಣಧಂತೆ ಎಲ್ಲ ಕಡೆಗೂ ಹಬ್ಬುತ್ತಿದ್ದರೂ ದೇಶ ತೊರೆದು ಓಡಿ ಹೋಗುವ ಆಸೆ ಬಾಜಿಯೊಳಿಗೂ ಇಲ್ಲ; ಅವಳ ಗೆಳತಿಯರಿಗೂ ಇಲ್ಲ. "ನಾವು ವೈದ್ಯರಾಗುತ್ತೇವೆ. ನಮ್ಮ ಜನರನ್ನು ಉಪಚರಿಸುತ್ತೇವೆ. ನಾವಂತೂ ಈ ನೆಲ ಬಿಟ್ಟು ಹೋಗುವುದಿಲ್ಲ. ಏನೇ ಆದರೂ, ಇದು ನಮ್ಮ ನೆಲ, ನಮ್ಮ ಸರ್ವಸ್ವವಲ್ಲವೇ" ಎನ್ನುವ ಬಾಜಿಯಾ ಹಾಗೂ ಅವಳ ಗೆಳತಿಯರು ಪ್ರಾಯಶಃ ಈ ನೆಲದ ವಿದ್ಯಾವಂತ ಹೆಣ್ಣು ಮಕ್ಕಳ ಕೊನೆಯ ಪೀಳಿಗೆಯೇ ಆಗಿರಬಹುದು.

ಬದುಕಿನ ಕ್ಲಿಷ್ಟತೆಯನ್ನು ದೂರ ಮಾಡಿ, ಬದುಕನ್ನು ಹಸನುಗೊಳಿಸಬೇಕಾದ ಮತಧರ್ಮಗಳು ಇಂದು 'ಆಕ್ಟೋಪಸ್'ಗಳಾಗುತ್ತಿವುದು ಎಂಥ ವಿಪರ್ಯಾಸವಲ್ಲವೆ?

★

"Achala" 108, Skyline Surabhi,
14-9, Vidyapeeta Road, BSK III Stage,
Bangalore - 560 085

To:
Smt/Sri

CPMG/KA/BG-8/99
Book-Post/News Letter